بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّي عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 01

ಸಂಚಿಕೆ: 29

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

30 ಜುಲೈ 2020, 30 ತಬ್‌ಲೀಗ್ 1399 ಹಿಜರಿ ಶಮ್‌ಸಿ,
08 ಝುಲ್-ಹಜ್ಜ್ 1441 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوْا لَا تَاْكُلُوْۤا اَمْوَالَكُمْ بَيْنَكُمْ بِالْبَاطِلِ اِلَّاۤ اَنْ تَكُوْنَ تِجَارَةً عَنْ تَرَاضٍ مِّنْكُمْ ۗ وَلَا تَقْتُلُوْۤا اَنْفُسَكُمْ ؕ اِنَّ اللّٰهَ كَانَ بِكُمْ رَحِيْمًا ○ (النساء:30)

(ಅನ್ನಿಸಾಅ್:30)

ಅಂದರೆ: ಎಲೈ ವಿಶ್ವಾಸಿಗಳೇ, ನಿಮ್ಮ ಧನವನ್ನು ಪರಸ್ಪರ ಅನ್ಯಾಯವಾಗಿ ತಿನ್ನಬೇಡಿರಿ. ಆದರೆ ನೀವು ಉಭಯ ಸಮ್ಮತದಿಂದ ವ್ಯಾಪಾರ ಮೂಲಕ ಧನ ಸಂಪಾದನೆ ಮಾಡಬಹುದು.ನಿಮ್ಮನ್ನೇ ನೀವು ಕೊಲ್ಲಬೇಡಿರಿ.ನಿಸ್ಸಂದೇಹವಾಗಿಯೂ ಅಲ್ಲಾಹನು ನಿಮ್ಮ ಮೇಲೆ ಅತಿ ಹೆಚ್ಚು ಕರುಣೆಯುಳ್ಳವನಾಗಿದ್ದಾನೆ.

**ಸತ್ಕರ್ಮಗಳಿಗೆ ಪ್ರಾಮುಖ್ಯತೆ ಇದೆ. ಅಲ್ಲಾಹನ ಮುಂದೆ ಸ್ವೀಕರಿಸಲ್ಪಡುವ ವಸ್ತುವೆಂದರೆ ಅದು ಸತ್ಕರ್ಮಗಳಾಗಿವೆ.**

**ವಿಷಯ ಕೇವಲ ಮಾತಿಗಷ್ಟೆ ಸೀಮಿತವಾದರೆ ಮತ್ತು ತೋರಿಕೆ ಇದ್ದಲ್ಲಿ ಅನ್ಯರಲ್ಲಿ ಹಾಗೂ ಮತ್ತು ನಮ್ಮಲ್ಲಿ ವ್ಯತ್ಯಾಸವಾದರು ಏನು? ಇತರರ ಮೇಲೆ ನಮಗೆ ಆಧ್ಯತೆ ಏನು ಲಭಿಸಿದಂತಾಯಿತು? ನೀವು ಸಾತ್ಮಿಕರಾಗಿರಿ ಅದರಲ್ಲಿ ಒಂದು ಸೆಳೆತವಿದೆ ಅದು ಇತರರನ್ನು ಆಕರ್ಷಿಸುತ್ತದೆ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಸತ್ಕರ್ಮಗಳು ಮತ್ತು ಭಯಭಕ್ತಿ:

ನಾನು ನನ್ನ ಜಮಾಅತ್ತನ್ನು ಸಂಭೋಧಿಸಿ ಹೇಳುತ್ತೇನೆ. ಅಲ್ಲಾಹನ ಮುಂದೆ ಸ್ವೀಕರಿಸಲ್ಪಡುವ ವಸ್ತುವೆಂದರೆ ಅದು ಸತ್ಕರ್ಮಗಳಾಗಿವೆ. **"ಇಲೈಹಿ ಯಸ್‌ಅಲುಲ್ ಕಲಿಮತ್ತಯ್ಯಿಬು"** (ಫಾತಿರ್:11) ಅಲ್ಲಾಹನು ಸ್ವಯಂ ನುಡಿಯುವನು ಈ ಸಮಯ ನಮ್ಮ ಲೇಖನಿಗಳೇ ರಸೂಲುಲ್ಲಾಹ್[ಸ] ರವರ ಖಡ್ಗ ಸಮಾನವಾಗಿವೆ. ಆದರೆ ಭಯಭಕ್ತಿಯುಳ್ಳವರಿಗೆ ಮಾತ್ರ ವಿಜಯ ದೊರೆಯುವುದು. ಇದು ಅಲ್ಲಾಹನ ವಾಗ್ದಾನವಾಗಿದೆ. **"ಕಾನ ಹಖ್ಖನ್ ಅಲೈನಾ ನಸ್ರುಲ್ ಮೂಮಿನೀನ್"** (ಅರ್ರೂಮ್:48) ವಿಶ್ವಾಸಿಗಳಿಗೆ ನೆರವೀಯುವುದು ನಮ್ಮ ಹೊಣೆಗಾರಿಕೆಯಾಗಿದೆ. ಮತ್ತು **"ಲೈಯ್ಯಜ್ ಅಲಲ್ಲಾಹು ಲಿಲ್ ಕಾಫಿರೀನ ಅಲಲ್ ಮೂಮಿನೀನ ಸಬೀಲಾ."** (ಅನ್ನಿಸಾಅ್:142) ಅಲ್ಲಾಹನು ಎಂದಿಗೂ ಅವಿಶ್ವಾಸಿಗಳಿಗೆ ವಿಶ್ವಾಸಿಗಳ ಮೇಲೆ ವಿಜಯದ ಮಾರ್ಗವನ್ನು ತೆರೆಯಲಾರನು. ಆದುದರಿಂದ ನೆನಪಿಡಿರಿ ನಮ್ಮ ವಿಜಯ, ಭಯಭಕ್ತಿಯ ಮೇಲೆ ಅವಲಂಬಿತಗೊಂಡಿದೆ. ಇಲ್ಲದಿದ್ದರೆ ಅರಬಿ ಜನರು ಕೇವಲ ಲೆಕ್ಚರರ್‌ಗಳು, ಉಪನ್ಯಾಸಕರು ಹಾಗೂ ಕವಿಗಳಾಗಿದ್ದರು. ಅವರ ಭಯ ಭಕ್ತಿಯುಳ್ಳವರಾದರು, ಆಗ ಅಲ್ಲಾಹನು ಅವರ ನೆರವಿಗಾಗಿ ತಮ್ಮ ದೇವದೂತರನ್ನು ಕಳುಹಿಸಿದನು. ಮನುಷ್ಯನು ಇತಿಹಾಸ ಓದಿದವನಾದರೆ ಕಾಣಬಹುದು ಸಹಾಬ[ರ] ಏನೆಲ್ಲ ವಿಜಯಗಳನ್ನು ಪಡೆದಿದ್ದಾರೆ ಅದು ಮಾನವಶಕ್ತಿಯಿಂದ ಮತ್ತು ಪ್ರಯತ್ನಗಳಿಂದ ಅಸಾಧ್ಯವಾಗಿತ್ತು. ಹಝ್ರತ್ ಉಸ್ಮಾನ್[ರ] ರವರ ಇಪ್ಪತ್ತು ವರ್ಷಗಳ ಒಳಗೆ ಇಸ್ಲಾಮಿನ ಆಡಳಿತವು ವಿಶ್ವವ್ಯಾಪ್ತಿ ಆಯಿತು. ಮನುಷ್ಯರಿಂದ ಇದು ಸಾಧ್ಯ ಎಂದು ಯಾರಾದರೂ ನಮಗೆ ತೋರಿಸಬಹದೇ? ಆ ಕಾರಣದಿಂದ ಅಲ್ಲಾಹನು ಮತ್ತೆ ಮತ್ತೆ ಹೇಳುವನು. **"ಇನ್ನಲ್ಲಾಹ ಮಾಅಲ್ಲಝೀನತ್ತಖೌ ವಲ್ಲಝೀನ ಹುಮ್ ಮುಹ್‌ಸಿನೀನ್."** (ಅನ್ನಹಲ್: 129) ನಿಶ್ಚಯವಾಗಿಯೂ ಭಯಭಕ್ತಿಯುಳ್ಳರ ಮತ್ತು ಸತ್ಕರ್ಮ ಮಾಡುವವರ ಜೊತೆಯಲ್ಲಿ ಅಲ್ಲಾಹನಿದ್ದಾನೆ.

### ಭಯಭಕ್ತಿಯುಳ್ಳವನು ಮತ್ತು ಸತ್ಕರ್ಮಗೈಯುವವನು

"ಮುತ್ತಖಿ" ಯ ಅರ್ಥ ಭಯಪಡುವವನು. ಇನ್ನೊಂದು ಕೆಡುಕನ್ನು ತ್ಯಜಿಸುವುದು, ಮತ್ತೊಂದು ಸತ್ಕರ್ಮಗಳನ್ನು ಮಾಡುವುದು. "ಮುತ್ತಖಿ" ಕೆಡುಕನ್ನು ತೊರೆಯುವ ಅರ್ಥ ಒಳಗೊಂಡಿರುತ್ತದೆ. ಮತ್ತು "ಮೊಹಸಿನ್" ಸತ್ಕರ್ಮ ಮಾಡ ಬಯಸುತ್ತಾನೆ. ನಾನು ಈ ಬಗ್ಗೆ ಒಂದು ಕಥೆ ಓದಿರುತ್ತೇನೆ. ಒಬ್ಬ ಸಜ್ಜನನು ಒಬ್ಬನನ್ನು ಔತಣಕ್ಕೆ ಕರೆದನು, ಹಾಗೂ ಅವನ ಅತಿಥಿ ಸತ್ಕಾರದ ಎಲ್ಲ ಏರ್ಪಾಡುಗಳನ್ನು ಮಾಡಿದನು. ಮತ್ತು ಅತಿಥಿ ಸತ್ಕಾರದ ಹಕ್ಕನ್ನು ಪೂರೈಸಿದನು. ಊಟ ಮಾಡಿ ಆದ ನಂತರ ಆ ಸಜ್ಜನನು ವಿನಯಪೂರಕವಾಗಿ ಹೇಳಿದನು. ನನಗೆ ನಿಮ್ಮ ಅರ್ಹತೆಯ ಪ್ರಕಾರ ಸೇವೆ ಮಾಡಲು ಸಾಧ್ಯವಾಗಲಿಲ್ಲ. ಅತಿಥಿ ಹೀಗೆ ಹೇಳಿದನು. ನೀವು ನನ್ನ ಮೇಲೆ ಯಾವ ಉಪಕಾರವು ಮಾಡಲಿಲ್ಲ, ಬದಲಿಗೆ ನಾನು ನಿಮ್ಮ ಮೇಲೆ ಉಪಕಾರ ಮಾಡಿದ್ದೇನೆ. ಏಕೆಂದರೆ ನೀವು ಕೆಲಸದಲ್ಲಿ ಮಗ್ನರಾಗಿರುವಾಗ ನಿಮ್ಮ ಮನೆಗೆ ನಾನು ಬೆಂಕಿ ಇರಿಸಲಿಲ್ಲ. ಒಂದು ವೇಳೆ ನಾನು ಏನಾದರು ಬೆಂಕಿ ಇರಿಸುತ್ತಿದ್ದರೆ ಏನಾಗುತ್ತಿತ್ತು? ಅಂದರೆ ಭಯಭಕ್ತಿಯುಳ್ಳವನ ಕೆಲಸವೇನೆಂದರೆ ಕೆಡುಕುಗಳಿಂದ ದೂರವಿರುವುದು. ಇದರ ಮುಂದಿನ ಹೆಜ್ಜೆ ಎಂದರೆ ಒಳಿತನ್ನುಂಟು ಮಾಡುವುದು, ಅದನ್ನು ಇಲ್ಲಿ **"ಮುಹಸಿನೀನ್"** (ಸತ್ಕರ್ಮಿಗಳು) ಎಂಬ ಪದ ಬಳಸಲಾಗಿದೆ. ಅಂದರೆ ಒಳಿತನ್ನು ಮಾಡಬೇಕು. ಪೂರ್ಣ ಪ್ರಮಾಣದ ಸಜ್ಜನ ಮನುಷ್ಯನಾಗಬೇಕೆಂದರೆ ಕೆಡುಕನ್ನು ತ್ಯಜಿಸಿ ಒಳಿತನ್ನು ಹೆಚ್ಚಿಸಬೇಕು. ಇನ್ನೇನು ಒಳಿತನ್ನು ಮಾಡಬಹುದು? ಎಂದು.

"ಹೇಳುತ್ತಾರೆ: ಇಮಾಮ್ ಹುಸೇನ್[ರ] ರವರ ಬಳಿ ಓರ್ವ ಸೇವಕನು ಚಹಾ ತಂದನು. ಆತನು ಸಮೀಪ ಬಂದಾಗ ಆಕಸ್ಮಿಕವಾಗಿ ಅವನ ಕೈಯಿಂದ ಆ ಚಹಾದ ಕಪ್ ಇಮಾಮ್ ಹುಸೈನ್[ರ] ತಲೆಯ ಮೇಲೆ ಬಿತ್ತು. ಅವರು ನೋವಿನಂದ ತೀಕ್ಷಣ ದೃಷ್ಟಿಯಿಂದ ಅವನನ್ನು ನೋಡಿದರು. ಸೇವಕನು ಮೆಲ್ಲ ಧ್ವನಿಯಿಂದ **"ವಲ್‌ಕಾಝಿಮೀನಲ್ ಗೈಝ** (ಆಲಿ ಇಮ್ರಾನ್:135) ಎಂದು ಓದಿದರು ಇದನ್ನು ಕೇಳಿ ಇಮಾಮ್ ಹುಸೇನ್[ರ] ಹೇಳಿದರು. **ಕಝಿಮ್‌ತು** ಸೇವಕನು ಮತ್ತು ಹೇಳಿದನು **"ವಲ್ ಆಪೀನ ಅನಿನ್ನಾಸ್"**. 'ಕಝ್‌ಮ' ನಲ್ಲಿ ಮನುಷ್ಯನು ಕೋಪವನ್ನು ನಿಯಂತ್ರಿಸಿಕೊಳ್ಳುತ್ತಾನೆ. ಕೋಪ ಜಾಹಿರು ಪಡಿಸುವುದಿಲ್ಲ ಆದರೆ ಒಳಗಿನಿಂದ ಪೂರ್ಣ ಸಮ್ಮತಿ ತೀರುವುದಿಲ್ಲ. ಆದುದರಿಂದ "ಅಫು" (ಕ್ಷಮೆ) ವನ ಶರತ್ತು ವಿಧಿಸಲಾಗಿದೆ. ಇಮಾಮ್ ಹುಸೇನರು ಹೇಳಿದರು. ನಾನು ಕ್ಷಮಿಸಿದೆ. ಮತ್ತು ಸೇವಕರು ಓದಿದನು. **"ವಲ್ಲಾಹು ಯುಹಿಬ್ಬುಲ್ ಮುಹ್‌ಸಿನೀನ್"** ಕೋಪ ನಿಯಂತ್ರಿಸಿಕೊಂಡು ಕ್ಷಮಿಸಿದ ನಂತರ ಒಳಿತನ್ನು ಮಾಡುವರಿಗೆ ಅಲ್ಲಾಹನು ಇಷ್ಟಪಡುವನು ಆಗ ಇಮಾಮ್ ಹುಸೇನರು ಹೇಳಿದರು. ಹೋಗು ನಾನು ನಿನ್ನನ್ನು ಬಿಡುಗಡೆ ಗೊಳಿಸುತ್ತೇನೆ. ಸಜ್ಜನರ ಮಾದರಿಗಳನ್ನು ನೋಡಿರಿ. ಚಹಾ ಬೀಳಿಸಿಯೂ ಗುಲಾಮನು ಸ್ವತಂತ್ರನಾದನು. ಈ ಸುಂದರ ಮಾದರಿಯು ಇಂತಹ ತತ್ವದಿಂದಲೇ ಸಾಧ್ಯವಾಗಿದೆ.

### ಹಝ್ರತ್ ರಸೂಲುಲ್ಲಾಹ್[ಸ] ರವರ ಪವಿತ್ರ ಅನುಗ್ರಹ ಶಕ್ತಿ

ಅಲ್ಲಾಹನು ನುಡಿದನು: **ಫಸ್ತಖಿಮ್ ಕಮಾ ಉಮಿರ್‌ತ** (ಹೂದ್:113) ಅಂದರೆ ದೃಢವಾಗಿ ನಿಲ್ಲಿರಿ. ಯಾವುದೇ ರೀತಿಯ ದುಷ್ಕರ್ಮವಿರಬಾರದು ಆಗ ನಾನು ರಾಜಿಯಾಗಬೇಕು. ನೀವು ಸಹಃ ದೃಢವಾಗಿ ಮತ್ತು ಇತರರನ್ನು ದೃಢಗೊಳಿಸಿರಿ. ಅರೆಬಿಯರನ್ನು ಸುಧಾರಿಸುವುದು ಎಷ್ಟೊಂದು ಕಠಿಣ ಕಾರ್ಯವಾಗಿತ್ತು. ರಸೂಲುಲ್ಲಾಹ್[ಸ] ರವರಿಗೆ ಜನರು ಕೇಳಿದ ಮೇಲೆ ಹೇಳಿದರು:

*(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು ಎಲ್ಲೈ ಇಬ್ನೆ ಔಫ್!! ನೀವು ಸ್ವರ್ಗದಲ್ಲಿ ತೆವಳುತ್ತ ಪ್ರವೇಶಿಸುವಿರಿ ಏಕೆಂದರೆ ನೀವು ಶ್ರೀಮಂತರಾಗಿದ್ದೀರಿ. ಆದ್ದರಿಂದ ಅಲ್ಲಾಹನ ಮಾರ್ಗದಲ್ಲಿ ಸಾಂಪತ್ತಿಕ ತ್ಯಾಗಗಳನ್ನು ನೀಡಿರಿ ಹೀಗೆ ಮಾಡಿದರೆ ನೀವು ನಡೆದುಕೊಂಡು ಸ್ವರ್ಗ ಪ್ರವೇಶಿಸುವಿರಿ.**

**ಅಲ್ಲಾಹನ ಮಾರ್ಗದಲ್ಲಿ ಅಲ್ಲಾಹನ ಸಂಪ್ರೀತಿಗಳಿಸಲು ಬಲಿದಾನಗಳನ್ನು ನೀಡುವವರು, ನಿಷ್ಠೆ ಮತ್ತು ಆತ್ಮೀಯತೆಯ ಮೂರ್ತಿರೂಪರಾಗಿದ್ದ ಬದರಿ ಸಹಾಬಿಯಾದ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಮತ್ತು ಹಝ್ರತ್ ಸಅದ್ ಬಿನ್ ಮುಆಝ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ಉಸ್ಮಾನ್ ಬಿನ್ ಅಫ್ಫಾನ್(ರ) ಹಾಗೂ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಅವರಿಬ್ಬರು ಭೂಮಿಯ ಮೇಲೆ ಅಲ್ಲಾಹನ ನಿಧಿಗಳಲ್ಲಿ ಎರಡಿ ನಿಧೀಗಳಾಗಿದ್ದಾರೆ ಅವರು ಅಲ್ಲಾಹನ ಸಂಪ್ರೀತಿಗಾಗಿ ಖರ್ಚು ಮಾಡುತ್ತಾರೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **19-06-2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

اِيَّاكَ نَعْبُدُ وَ اِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಕಳೆದ ವಾರದ ಖುತುಬದಲ್ಲಿಯೂ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ)ರ ಬಗ್ಗೆ ವಿವರಿಸಿದ್ದೆನು. ಅದರ ಸ್ವಲ್ಪ ಭಾಗ ವಿವರಿಸಲು ಬಾಕಿಯಾಗಿತ್ತು. ಅದನ್ನು ಇಂದು ವಿವರಿಸುವೆನು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫರ ಔದಾರ್ಯ ಪ್ರಸಿದ್ಧವಾಗಿತ್ತು. ಅವರು ಬಹಳ ಸಾಂಪತ್ತಿಕ ತ್ಯಾಗಗಳನ್ನು ಮಾಡಿದ್ದರು. ಒಂದು ವರದಿ ಪ್ರಕಾರ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಹೀಗೆ ವಸಿಯ್ಯತ್ ಮಾಡಿದ್ದರು. ತಾನು ಮೃತನಾಗುವಾಗ ಬಿಟ್ಟು ಹೋಗುವ ಸ್ವತ್ತಿನಿಂದ ನಾಲ್ಕುನೂರು ದೀನಾರ್ ಬದರ್ ಯುದ್ಧದಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬ ಸಹಾಬರಿಗೆ ನೀಡಬೇಕು ಎಂದು. ಆಗ ಜೀವಿಸಿದ್ದ ಬದರಿ ಸಹಾಬರ ಸಂಖ್ಯೆ ನೂರು ಆಗಿತ್ತು. ಅವರೆಲ್ಲರಿಗೂ ಹಣ ನೀಡಲಾಯಿತು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಭಾಗ-4, ಪುಟ-293, ದಾರುಲ್ ಫಿಕರ್ ಬೈರೂತ್ 1995)

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಬೂಕ್ ಯುದ್ಧಕ್ಕೋಸ್ಕರ ಸಿದ್ಧತೆಗಳನ್ನು ನಡೆಸಬೇಕೆಂದು ಆಜ್ಞಾಪಿಸುತ್ತಾ ಶ್ರೀಮಂತರಾದ ಜನರು ಹಣ ಮತ್ತು ಸವಾರಿ ಮೃಗಗಳನ್ನು ಒದಗಿಸಬೇಕೆಂದು ಹೇಳಿದರು. ಅದಕ್ಕೆ ಹಝ್ರತ್ ಅಬೂಬಕ್ಕರ್(ರ) ತಮ್ಮ ಮನೆಯಲ್ಲಿದ್ದ ಎಲ್ಲಾ ಸಂಪತ್ತನ್ನು ನೀಡಿದರು ಅದರ ಮೌಲ್ಯ ಸುಮಾರು 4000 ದಿರ್‌ಹಮ್ ಆಗಿತ್ತು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹಝ್ರತ್ ಅಬೂಬಕ್ಕರ್(ರ) ರವರಿಗೆ ಪ್ರಶ್ನಿಸಿದರು ತಮ್ಮ ಮನೆಯವರಿಗಾಗಿ ಏನು ನೀಡಿದ್ದೀರಿ ಆಗ ಅವರು ಉತ್ತರಿಸಿದರು ಮನೆಯವರಿಗೆ ಅಲ್ಲಾಹ್ ಹಾಗೂ ಅಲ್ಲಾಹನ ಪ್ರವಾದಿಯನ್ನು ಬಿಟ್ಟಿದ್ದೇನೆ. ಹಝ್ರತ್ ಉಮರ್(ರ) ತಮ್ಮ ಮನೆಯ ಅರ್ಧ ಭಾಗ ಸಂಪತ್ತು ತಂದರು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹಝ್ರತ್ ಉಮರ್(ರ) ರವರನ್ನು ಕೇಳಿದರು ತಮ್ಮ ಮನೆಯವರಿಗಾಗಿ ಏನನ್ನು ಬಿಟ್ಟಿದ್ದೀರಿ? ಅಗ ಅವರು ಹೇಳಿದರು ಅರ್ಧ ಭಾಗ ಸಂಪತ್ತನ್ನು ಬಿಟ್ಟಿದ್ದೇನೆ.

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಒಂದು ನೂರು ಊಖಿಯ ನೀಡಿದರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಉಸ್ಮಾನ್ ಬಿನ್ ಅಫ್ಫಾನ್ ಮತ್ತು ಅಬ್ದುರ್ರಹ್ಮಾನ್ ಬಿನ್ ಔಫ್ ಭೂಮಿಯಲ್ಲಿರುವ ಅಲ್ಲಾಹನ ಖಜಾನೆಗಳಲ್ಲಿ ಎರಡು ಖಜಾನೆಗಳಾಗಿದ್ದಾರೆ. ಅವರು ಅಲ್ಲಾಹನ ಸಂಪ್ರೀತಿಗೋಸ್ಕರ ಖರ್ಚು ಮಾಡುವವರಾಗಿದ್ದಾರೆ. (ಅಸ್ಸೀರತುಲ್ ಹಲ್‌ಬಿಯಾ, ಸಂಪುಟ-3, ಪುಟ-184, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002, ಲುಗಾತುಲ್ ಹದೀಸ್, ಸಂಪುಟ-4, ಪುಟ-527)

ಹಝ್ರತ್ ಉಮ್ಮೆ ಬಕರ್ ಬಿನ್ತ್ ಮಿಸ್ವ(ರ) ವರದಿ ಮಾಡುತ್ತಾರೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಹಝ್ರತ್ ಉಸ್ಮಾನರಿಂದ ಒಂದು ಭೂಸ್ವತ್ತನ್ನು ನಲ್ವತ್ತು ಸಾವಿರ ದೀನಾರ್‌ಗೆ ಖರೀದಿಸಿ ಬನೂ ಝುಹ್ರ ಗೋತ್ರದ ಬಡವರಿಗೂ ಇತರ ಬಡವರಿಗೂ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತ್ನಿಯರಿಗೂ ಹಂಚಿದರು. ಮುಸವ್ವಿರ್ ಬಿನ್ ಮುಖ್‌ಝುಮ ವರದಿ ಮಾಡುತ್ತಾರೆ: ನಾನು ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾರವರಿಗೆ ಆ ಜಮೀನಿನಿಂದ ಅವರ ಪಾಲನ್ನು ನೀಡಿದಾಗ ಅವರು ಕೇಳಿದರು: ಇದನ್ನು ಕೊಟ್ಟವರು ಯಾರು? ನಾನು ಹೇಳಿದೆ: ಅಬ್ದುರ್ರಹ್ಮಾನ್ ಬಿನ್ ಔಫ್. ಆಗ ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾ ಹೇಳಿದರು: ನನ್ನ ಅನಂತರ ನಿನ್ನೊಂದಿಗೆ ಉತ್ತಮವಾಗಿ ವರ್ತಿಸುವವನು ಅತ್ಯಂತ ಹೆಚ್ಚು ಸಹನೆ ದೋರುವವನಾಗಿರುವನು ಎಂದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾರೆ. ಅನಂತರ ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾ ಹೀಗೆ ಪ್ರಾರ್ಥಿಸಿದರು: ಓ ಅಲ್ಲಾಹ್, ಅಬ್ದುರ್ರಹ್ಮಾನ್ ಬಿನ್ ಔಫರಿಗೆ ಸ್ವರ್ಗದ ಸಲ್‌ಸಬೀಲ್ ಒರತೆಯ ನೀರು ಕುಡಿಸು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-98, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990, ರೌಶನ್ ಸಿತಾರೆ ಗುಲಾಮ್ ಬಾರಿ ಸೈಫ್ ಸಾಹೆಬ್ ಸಂಪುಟ-2, ಪುಟ-119)

ಒಂದು ವರದಿಯಲ್ಲಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು ನನ್ನ ಅನಂತರ ನನ್ನ ಕುಟುಂಬದವರೊಂದಿಗೆ ಉತ್ತಮವಾಗಿ ವರ್ತಿಸುವ ವ್ಯಕ್ತಿ ಬಹಳ ನಿಷ್ಠಾವಂತ ಹಾಗೂ ಭಯಭಕ್ತಿವುಳ್ಳವನಾಗಿರುತ್ತಾನೆ. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಉಮ್ಮಹಾತುಲ್ ಮೂಮಿನೀನರನ್ನು ಅವರ ಸವಾರಿಗಳೊಂದಿಗೆ ಕರೆದುಕೊಂಡು ಹೋಗುತ್ತಿದ್ದರು. ಅವರಿಗೆ ಹಜ್ಜ್ ಯಾತ್ರೆ ಮಾಡಿಸುತ್ತಿದ್ದರು ಮತ್ತು ಅವರ ಪಲ್ಲಕ್ಕಿಗಳಿಗೆ ಪರದೆ ಹಾಸಿಸುತ್ತಿದ್ದರು ಮತ್ತು ತಂಗುವುದಕ್ಕೆ ಜನನಿಬಿಡವಿಲ್ಲದ ಪ್ರದೇಶವನ್ನು ಆಯ್ಕೆ ಮಾಡುತ್ತಿದ್ದರು ಹೀಗೆ ಅವರ ಸ್ವತಂತ್ರದ ಬಗ್ಗೆಯು ಯೋಚಿಸುತ್ತಿದ್ದರು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಭಾಗ-4, ಪುಟ-292, ದಾರುಲ್ ಫಿಕರ್ ಬೈರೂತ್ 1995)

ಒಮ್ಮೆ ಮದೀನದಲ್ಲಿ ಆಹಾರ ಪದಾರ್ಥಗಳ ಕ್ಷಾಮವಿತ್ತು. ಆ ಸಮದಲ್ಲಿ ಸಿರಿಯಾ ದೇಶದಿಂದ ಗೋದಿಹಿಟ್ಟು ಮತ್ತು ಇತರ ಆಹಾರ ಪದಾರ್ಥಗಳನ್ನು ಹೇರಿದ ಏಳುನೂರು ಒಂಟೆಗಳ ಗುಂಪು ಮದೀನವನ್ನು ಪ್ರವೇಶಿಸಿದಾಗ ಮದೀನದಲ್ಲಿ ಪ್ರತಿಯೊಂದು ಸ್ಥಳದಲ್ಲಿ ಕೋಲಾಹಲ ಕೇಳಿಸಿತು. ಆಗ ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾ ಏನದು ಕೋಲಾಹಲ ಎಂದು ಕೇಳಿದರು. ಅವರೊಂದಿಗೆ ಹೀಗೆ ನಿವೇದಿಸಲಾಯಿತು: ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫರ ಏಳುನೂರು ಒಂಟೆಗಳ ತಂಡ ಆಗಮಿಸಿದೆ ಎಂದು. ಆಗ ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾ ಹೇಳಿದರು: ಹಝ್ರತ್ ನಬಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿರುವುದನ್ನು ನಾನು ಕೇಳಿದ್ದೇನೆ: ಅಬ್ದುರ್ರಹ್ಮಾನ್ ಬಿನ್ ಔಫ್ ಮೊಣಕಾಲೂರುತ್ತಾ ಸ್ವರ್ಗವನ್ನು ಪ್ರವೇಶಿಸುವರು. ಉಮ್ಮುಲ್ ಮೂಮಿನೀನ್ ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾರವರು ಹೇಳಿದ ಈ ಮಾತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫರಿಗೆ ತಲಪಿದಾಗ ಅವರು

ಹಝ್ರತ್ ಆಯಿಶ(ರ) ರವರ ಬಳಿಗೆ ಹೋಗಿ ಹೇಳಿದರು: 'ಓ ನನ್ನ ಮಾತೆ, ಈ ಎಲ್ಲ ಧಾನ್ಯ, ಇತರ ಆಹಾರ ಸಾಮಗ್ರಿಗಳು ಮತ್ತು ಹೇರಲಾದ ಇತರ ವಸ್ತುಗಳು ಒಂಟೆಯ ಬೆನ್ನ ಹಾಸುಬಟ್ಟೆ ಸಮೇತ ಎಲ್ಲವನ್ನೂ ನಾನು ಅಲ್ಲಾಹನ ಮಾರ್ಗದಲ್ಲಿ ನೀಡಿದೆನು' – ನಡೆದುಕೊಂಡು ಸ್ವರ್ಗವನ್ನು ಪ್ರವೇಶಿಸಲಿಕ್ಕೋಸ್ಕರ. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಭಾಗ–3, ಪುಟ–478, ದಾರುಲ್, ಕುತುಬ್ ಇಲ್‌ಮಿಯ ಬೈರೂತ್, ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಸಂಪುಟ–2, ಪುಟ–110–111)

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರು ಅಲ್ಲಾಹನ ಮಾರ್ಗದಲ್ಲಿ ಮಾಡಿದ ಸಾಂಪತ್ತಿಕ ತ್ಯಾಗಗಳ ಅನೇಕ ಘಟನೆಗಳನ್ನು ಸಹಾಬರವರ ಜೀವನಚರಿತ್ರೆಗಳನ್ನು ಸಂಗ್ರಹಿಸುವವರು ಸಂಗ್ರಹಿಸಿದ್ದಾರೆ. ಉಸದುಲ್‌ಗಾಬದಲ್ಲಿ ಬರೆಯಲಾಗಿದೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವವರಾಗಿದ್ದರು. ಒಮ್ಮೆ ಅವರು ಪ್ರತಿದಿನ ಮೂವತ್ತು – ಮೂವತ್ತು ಗುಲಾಮರನ್ನು ವಿಮೋಚಿಸಿದರು. (ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಸಂಪುಟ–2, ಪುಟ–110)

ಒಮ್ಮೆ ಹಝ್ರತ್ ಉಮರ್(ರ) ರವರಿಗೆ ಹಣದ ಅವಶ್ಯಕತೆ ಆದಾದಾಗ ಅವರು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರಿಂದ ಸಾಲ ಕೇಳಿದರು. ಅವರು ಹೇಳಿದರು ಯಾ ಅಮೀರಲ್ ಮೂಮಿನೀನ್!! ನೀವು ನನ್ನಿಂದ ಏಕೆ ಕೇಳುತ್ತಿದ್ದೀರಿ. ಬೈತುಲ್ ಮಾಲ್‌ನಿಂದ ಹಣ ಪಡೆಯಬಹುದು. ಉಸ್ಮಾನ್ ಅಥವಾ ಬೇರೆಯವರಿಂದಲೂ ಸಲ ಪಡೆಯಬಹುದು. ಇದಕ್ಕೆ ಹಝ್ರತ್ ಉಮರ್(ರ) ಹೇಳಿದರು ನಾನು ನಿಮ್ಮಿಂದ ಏಕೆ ಕೇಳುತ್ತಿದ್ದೇನೆ ಎಂದರೆ ಬೈತುಲ್ ಮಾಲ್‌ನಿಂದ ಪಡೆದ ಸಾಲ ಹಿಂದಿರುಗಿಸಲು ಮರೆಯಬಹುದು. ಮತ್ತು ಬೇರೆಯವರಿಂದ ಸಾಲ ಪಡೆದರೆ ನಾನು ಅವರ ಸಾಲ ಹಿಂದಿರುಗಿಸಲು ಮರೆಯಬಹುದು ಅಥವಾ ಅವರು ನನ್ನಿಂದ ಸಂಕೋಚದ ಕಾರಣ ತಮ್ಮ ಸಾಲ ಹಿಂದಿರುಗಿಸಲು ಪ್ರಶ್ನಿಸದಿರಬಹುದು ಆದರೆ ನೀವು ನಿಮ್ಮ ಸಾಲವನ್ನು ನನ್ನಿಂದ ಕೇಳಿ ಅವಶ್ಯವಾಗಿ ಪಡೆಯಿರಿ. (ಅಶ್‌ರಹ್ ಮುಬಶ್ಶಿರಹ್, ಬಶೀರ್ ಸಾಜಿದ್, ಪುಟ–882, ಅಲ್‌ಬದರ್ ಪಬ್ಲಿಕೇಶನ್ ಲಾಹೋರ್) ಅಂದರೆ ಅವರ ಮಧ್ಯೆ ಯಾವುದೇ ಸಂಕೋಚದ ಸಂಬಂಧ ಇರಲಿಲ್ಲ. ಅವರಿಗೆ ಅವಶ್ಯಕತೆ ಇದ್ದಾಗ ಅವರು ಪಡೆಯಬಹುದಾಗಿತ್ತು.

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರ ಪುತ್ರ ಇಬ್ರಾಹೀಮ್ ತಮ್ಮ ತಂದೆಯವರಿಂದ ವರದಿ ಮಾಡುತ್ತಾರೆ: ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು ಎಲ್ಲೈ ಇಬ್ನೆ ಔಫ್!! ನೀವು ಸ್ವರ್ಗದಲ್ಲಿ ತೆವಳುತ್ತ ಪ್ರವೇಶಿಸುವಿರಿ ಏಕೆಂದರೆ ನೀವು ಶ್ರೀಮಂತರಾಗಿದ್ದೀರಿ. ಆದ್ದರಿಂದ ಅಲ್ಲಾಹನ ಮಾರ್ಗದಲ್ಲಿ ಸಾಂಪತ್ತಿಕ ತ್ಯಾಗಗಳನ್ನು ನೀಡಿರಿ ಹೀಗೆ ಮಾಡಿದರೆ ನೀವು ನಡೆದುಕೊಂಡು ಸ್ವರ್ಗ ಪ್ರವೇಶಿಸುವಿರಿ. ಹಝ್ರತ್ ಆಯಿಶ(ರ)ರವರ ವರದಿಯು ಸಹ ಹೀಗೆಯೇ ಇದೆ. ತದನಂತರ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹೇಳಿದರು ಯಾ ರಸೂಲಲ್ಲಾಹ್!! ಅಲ್ಲಾಹನ ಮಾರ್ಗದಲ್ಲಿ ಏನನ್ನು ಅರ್ಪಿಸಲಿ? ಹೇಳಿದರು ನಿಮ್ಮ ಬಳಿ ಏನಿದೆಯೋ ಅದನ್ನು ಅರ್ಪಿಸಿರಿ. ಹೇಳಲಾಯಿತು ಯಾ ರಸೂಲಲ್ಲಾಹ್!! ಸಂಪೂರ್ಣ ಅರ್ಪಿಸಬೇಕೆ? ಹೌದು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ತಮ್ಮ ಸಂಪೂರ್ಣ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಅರ್ಪಿಸಲು ಇರಾದೆ ಮಾಡಿಕೊಂಡು ಹೊರಟಿದ್ದರು. ಸ್ವಲ್ಪ ಸಮಯದ ನಂತರ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅವರಿಗೆ ಕರೆಸಿ ಹೇಳಿದರು ನೀವು ಹೊರಟ ನಂತರ ಜಿಬ್ರಾಯೀಲರು ಬಂದು ಹೇಳಿದರು: ಅಬ್ದುರ್ರಹ್ಮಾನರಿಗೆ ಹೇಳಿರಿ ಅವರು ಅತಿಥಿ ಸತ್ಕಾರ ಮಾಡಿರಿ, ನಿರ್ಗತಿಕರನ್ನು ಊಟೋಪಚಾರ ಮಾಡಿರಿ, ಕೇಳುವವರಿಗೆ ನೀಡಿರಿ ಮತ್ತು ಅನ್ಯ ಸಂಬಂಧಿಕರ ಮೇಲೆ ಮೊದಲು ಖರ್ಚು ಮಾಡಿರಿ. ಅವರು ಹೀಗೆ ಮಾಡಿದರೆ ಮಾತ್ರ ಅವರ ಸಂಪತ್ತು ಶುದ್ಧವಾಗುವುದು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–97, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990, ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಸಂಪುಟ–2, ಪುಟ–112)

ಅಲ್ಲಾಹನ ಮಾರ್ಗದಲ್ಲಿ ಶುದ್ಧ ಸಂಪತ್ತನ್ನು ಅರ್ಪಿಸಿರುವ ಕಾರಣದಿಂದ ಅವರು ಸ್ವರ್ಗದಲ್ಲಿ ಮೊಣಕಾಲಿನ ಮೇಲೆ ಪ್ರವೇಶಿಸುವುದಿಲ್ಲ ಬದಲಿಗೆ ರಸೂಲುಲ್ಲಾಹ್(ಸ) ಹೇಳಿದರು ಕಾಲಿನ ಮೇಳೆ ನಿಂತು ಸ್ವರ್ಗಕ್ಕೆ ಪ್ರವೇಶಿಸುವರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಒಮ್ಮೆ ತಮ್ಮ ಸಂಪತ್ತಿನ ಅರ್ಧಾಂಶವಾದ ನಾಲ್ಕು ಸಾವಿರ ದಿರ್‌ಹಮ್ ಅಲ್ಲಾಹನ ಮಾರ್ಗದಲ್ಲಿ ನೀಡಿದರು. ಇನ್ನೊಮ್ಮೆ ನಲ್ವತ್ತು ಸಾವಿರ ದಿರ್‌ಹಮ್ ಮತ್ತೊಮ್ಮೆ ನಲ್ವತ್ತು ಸಾವಿರ ದೀನಾರ್ ಅಲ್ಲಾಹನ ಮಾರ್ಗದಲ್ಲಿ ಸದಖವಾಗಿ ನೀಡಿದರು. ಒಮ್ಮೆ ಐನೂರು ಕುದುರೆಗಳನ್ನು ಅಲ್ಲಾಹನ ಮಾರ್ಗದಲ್ಲಿ ಸಮರ್ಪಿಸಿದರು. ಮತ್ತೊಮ್ಮೆ ಐನೂರು ಒಂಟೆಗಳನ್ನು ಅಲ್ಲಾಹನ ಮಾರ್ಗದಲ್ಲಿ ನೀಡಿದರು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಭಾಗ–3, ಪುಟ–478, ದಾರುಲ್ ಕುತುಬ್ ಇಲ್‌ಮಿಯ ಬೈರೂತ್, ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಸಂಪುಟ–2, ಪುಟ–111)

ಅವರ ಪುತ್ರ ಅಬೂ ಸಲ್ಮಾ ವರದಿ ಮಾಡುತ್ತಾರೆ: ನಮ್ಮ ಪಿತ ಉಮ್ಮುಹಾತುಲ್ ಮೂಮಿನೀನ್ (ಮುಸ್ಲಿಮರ ಮಾತೆಯರು ಎಂದು ಕರೆಯಲ್ಪಡುವ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತ್ನಿಯರು) ಅವರಿಗೆ ಒಂದು ತೋಟ ನೀಡುವ ವಸಿಯ್ಯತ್ ಮಾಡಿದ್ದರು. ಆ ತೋಟದ ಬೆಲೆ ನಾಲ್ಕು ಲಕ್ಷ ದಿರ್‌ಹಮ್ ಆಗಿತ್ತು. (ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಸಂಪುಟ–2, ಪುಟ–119)

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ತನ್ನ ಮರಣಾನಂತರ ಅಲ್ಲಾಹನ ಮಾರ್ಗದಲ್ಲಿ ಐವತ್ತು ಸಾವಿರ ದೀನಾರ್ ನೀಡಬೇಕೆಂದು ವಸಿಯ್ಯತ್ ಮಾಡಿದ್ದರು. ತರ್ಕ (ಮರಣದ ನಂತರ ಬಿಟ್ಟು ಹೋಗುವ ಆಸ್ತಿ) ದಲ್ಲಿ 1000 ಒಂಟೆಗಳು, 3000 ಆಡುಗಳು, 100 ಕುದುರೆಗಳಿದ್ದವು ಅವೂ ಬಖೀನಲ್ಲಿ ಮೇಯುತ್ತಿದ್ದವು. ಜುರ್‌ಫಜೂ ಮದೀನದಿಂದ ಮೂರು ಮೈಲಿ ದೂರದಲ್ಲಿ ಉತ್ತರ ಭಾಗದಲ್ಲಿ ಒಂದು ಸ್ಥಳವಿದೆ ಅಲ್ಲಿ ಹಝ್ರತ್ ಉಮರ್(ರ) ರವರ ಆಸ್ತಿ ಇದೆ. ಆ ಪ್ರದೇಶದಲ್ಲಿ 20 ನೀರು ಎಳೆಯುವ ಬಂಡೆಗಳಿಂದ ಅವರು ಉಳುಮೆ ಮಾಡುತ್ತಿದ್ದರು. ಅದರಿಂದಲೇ ಮನೆಯವರು ಇಡೀ ವರ್ಷದ ಆದಾಯ ಪಡೆಯುತ್ತಿದ್ದರು. ಒಂದು ವರದಿ ಹೀಗಿದೆ: ಅವರು ತಮ್ಮ ತರ್‌ಜದಲ್ಲಿ ಎಷ್ಟು ಚಿನ್ನ ತ್ಯಜಿಸಿದರು ಎಂದರೆ ಅದನ್ನು ಕತ್ತರಿಸಲು ಕೊಡಲಿ ಉಪಯೋಗಿಸಬೇಕಾಯಿತು. ಅದನ್ನು ಕತ್ತರಿಸುವಾಗ ಜನರ ಕೈಗಳಲ್ಲಿ ಬೊಬ್ಬೆಗಳು ಬಂದಿದ್ದವು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–100–101, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990, ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಸಂಪುಟ–2, ಪುಟ–118, ಫರ್‌ಹಂಗ್ ಸೀರತ್, ಪುಟ–87, ಝುವಾರಿ ಅಕಾಡಮಿ ಕರಾಚಿ 2003)

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರು ಹಿಜರಿ 31 ಅಥವಾ 32ರಲ್ಲಿ ನಿಧನ ಹೊಂದಿದರು. ಅವರು 72 ವರ್ಷ ಕಾಲ ಜೀವಿಸಿದ್ದರು. ಬೇರೆ ಕೆಲವರ ಅಭಿಪ್ರಾಯ ಪ್ರಕಾರ ಅವರು 78 ವರ್ಷಗಳ ಕಾಲ ಜೀವಿಸಿದ್ದರು. ಅವರನ್ನು ಜನ್ನತುಲ್ ಬಖೀಅ್‌ನಲ್ಲಿ ದಫನು ಮಾಡಲಾಯಿತು. ಅವರ ಜನಾಝಾ ನಮಾಝ್ ಅನ್ನು ಹಝ್ರತ್ ಉಸ್ಮಾನ್(ರ) ನಿರ್ವಹಿಸಿದರು. ಇನ್ನೊಂದು ವರದಿಯ ಪ್ರಕಾರ ಹಝ್ರತ್ ಝುಬೈರ್ ಬಿನ್ ಉಮೂಮ್(ರ) ರವರು ಜನಾಝಾ ನಮಾಝ್ ನಿರ್ವಹಿಸಿದರು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಭಾಗ–4, ಪುಟ–293, ದಾರುಲ್ ಫಿಕರ್ ಬೈರೂತ್ 1995, ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–100, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರ ನಿಧನದ ಸಂದರ್ಭದಲ್ಲಿ ಹಝ್ರತ್ ಸಅದ್ ಬಿನ್ ಮಾಲಿಕ್(ರ) ಅವರ ಬಳಿ ನಿಂತು ಹೇಳಿದರು: ವಾಕಬಲಹ್!! ಅಕಟಕಟ ಬೆಟ್ಟದಂತಹ ವ್ಯಕ್ತಿತ್ವವುಳ್ಳ ವ್ಯಕ್ತಿ ನಮ್ಮನ್ನು ಬಿಟ್ಟು ಹೊರಟು ಹೋದರು. ಹಝ್ರತ್ ಅಲಿ(ರ) ಹೇಳಿದರು ಇಬ್ನೆ ಔಫ್ ಈ ಲೋಕವನ್ನು ತ್ಯಜಿಸಿದರು. ಅವರು ಲೌಕಿಕ ಚಿಲುಮೆಯಿಂದ ಶುದ್ಧ ನೀರನ್ನು ಕುಡಿದರು ಮತ್ತು ಅಶುದ್ಧ ನೀರನ್ನು ತ್ಯಜಿಸಿದರು. ಹೀಗೆ ಹೇಳಿರಿ, ಅವರು ಉತ್ತಮ ಕಾಲಾವಧಿಯನ್ನು ಗಳಿಸಿದರು ಮತ್ತು ಕೆಟ್ಟ ಅವಧಿಯಿಂದ ಮುಂಚೆಯೆ ಹೊರಟರು. (ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಸಂಪುಟ–2, ಪುಟ–117)

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರು ಮೂರು ಪತ್ನಿಯರನ್ನು ಅಗಲಿ ಹೋದರು. ಪ್ರತಿಯೊಂದು ಪತ್ನಿಯರಿಗೆ ಅವರ ಆಸ್ತಿಯ ಎಂಟನೇಯ ಪಾಲು ನೀಡಲಾಯಿತು ಅಂದರೆ 80,000 ದಿರ್‌ಹಮ್‌ಗಳ ಪ್ರತಿಯೊಂದು ಪತ್ನಿಯರಿಗೆ ನೀಡಲಾಯಿತು. ಇನ್ನೊಂದು ವರದಿಯ ಪ್ರಕಾರ ಅವರು ನಾಲ್ಕು ಪತ್ನಿಯರನ್ನು ಅಗಲಿ ಹೋದರು. ಪ್ರತಿಯೊಬ್ಬರಿಗೆ 80,000 ದಿರ್‌ಹಮ್ ಸಿಕ್ಕಿತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–101, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಇನ್ನು ನಾನು ಪ್ರಸ್ತಾಪಿಸುವ ಸಹಾಬಿಯ ಹೆಸರು ಹಝ್ರತ್ ಸಅದ್ ಬಿನ್ ಮುಆದ್(ರ). ಅನ್‌ಸಾರ್ ಗೋತ್ರವಾದ ಔಸ್‌ನ ಶಾಖೆ ಬನೂ ಅಬ್ದುಲ್ ಅಶ್‌ಹಲ್‌ಗೆ ಅವರು ಸೇರಿದ್ದರು. ಅವರು ಔಸ್ ಗೋತ್ರದ ಮುಖಂಡರಾಗಿದ್ದರು. ಅವರ ತಂದೆಯ ಹೆಸರು ಮುಆಝ್ ಬಿನ್ ನುಮಾನ್ ಮತ್ತು ತಾಯಿಯ ಹೆಸರು ಕಬ್‌ಶ ಬಿನ್ತ್ ರಾಫೆ(ರ) ಎಂದಾಗಿತ್ತು ಅವರು ಪ್ರವಾದಿ ಮುಹಮ್ಮದ್(ಸ) ರವರ ಸಹಾಬಿಯು ಆಗಿದ್ದರು. ಹಝ್ರತ್ ಸಅದ್ ಬಿನ್ ಮುಆಝ್(ರ) ರವರ ಉಪನಾಮ ಅಬೂ ಉಮ್‌ರೊ ಎಂದಾಗಿತ್ತು. ಹಝ್ರತ್ ಸಅದ್ ಬಿನ್ ಮುಆಝ್(ರ) ರವರ ಪತ್ನಿಯ ಹೆಸರು ಹಿಂದ್(ರ) ಬಿನ್ತ್ ಸಿಮಾಕ್(ರ) ಎಂದಾಗಿತ್ತು ಅವರು ಸಹ ಸಹಾಬಿಯ ಆಗಿದ್ದರು. ಹಝ್ರತ್ ಹಿಂದ್(ರ) ರವರಿಂದ ಹಝ್ರತ್ ಸಅದ್ ಬಿನ್ ಮುಆಝ್(ರ) ರವರ ಸಂತಾನದಲ್ಲಿ ಉಮ್‌ರೊ ಮತ್ತು ಅಬ್ದುಲ್ಲಾ ಇದ್ದರು. ಹಝ್ರತ್ ಸಅದ್ ಬಿನ್ ಮುಆಝ್(ರ) ಮತ್ತು ಹಝ್ರತ್ ಉಸೈದ್ ಬಿನ್ ಹುಝೈರ್(ರ) ಅವರಿಬ್ಬರು ಮುಸ್‌ಇಬ್

ಬಿನ್ ಉಮ್ಮೈರರ ಕೈಯಲ್ಲಿ ಇಸ್ಲಾಮಿಗೆ ಸೇರಿದರು. ಹಝ್ರತ್ ಮುಸ್ಇಬ್ ಬೈಅತೆ ಅಖಬ ಸಾನಿಯದ ಎಪ್ಪತ್ತು ಸಹಾಬರಲ್ಲಿ ಮೊದಲು ಮದೀನಕ್ಕೆ ಬಂದಿದ್ದರು. ಅವರನ್ನು ಮದೀನಕ್ಕೆ ಕಳುಹಿಸಲಾಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿರ್ದೇಶದ ಪ್ರಕಾರ ಜನರನ್ನು ಇಸ್ಲಾಮಿಗೆ ಆಹ್ವಾನಿಸುತ್ತಿದ್ದರು ಮತ್ತು ಪವಿತ್ರ ಖುರ್ಆನ್ ಓದಿ ಕೇಳಿಸುತ್ತಿದ್ದರು. ಹಝ್ರತ್ ಸಅದ್ ಬಿನ್ ಮುಆದ್ ಮುಸ್ಲಿಮರಾದಾಗ ಬನೂ ಅಬ್ದುಲ್ ಅಶ್ಹಲ್‌ರೊಂದಿಗೆ ಹೇಳಿದರು: ನೀವು ಮುಸ್ಲಿಮರಾಗುವ ತನಕ ನಿಮ್ಮ ಪುರುಷರೊಂದಿಗೂ ಮಹಿಳೆಯರೊಂದಿಗೂ ಮಾತನಾಡುವುದು ನನಗೆ ನಿಷಿದ್ಧವಾಗಿದೆ. ಅನಂತರ ಆ ಗೋತ್ರದವರೆಲ್ಲರು ಇಸ್ಲಾಮ್ ಸ್ವೀಕರಿಸಿದರು ಮತ್ತು ಅನ್ಸಾರ್‌ಗಳಲ್ಲಿ ಬನೂ ಅಬ್ದ್ ಅಶ್ಹಲ್‌ನ ಇಡೀ ಕುಟುಂಬದವರು ಇಸ್ಲಾಮ್ ಸ್ವೀಕರಿಸಿದರು.

ಹಝ್ರತ್ ಸಅದ್ ಬಿನ್ ಮುಆಝ್(ರ) ಹಝ್ರತ್ ಮಸ್ಅಬ್ ಬಿನ್ ಉಮ್ಮೈರ್(ರ) ಹಾಗೂ ಹಝ್ರತ್ ಅಸಅದ್ ಬಿನ್ ಝುರಾರ(ರ) ರವರನ್ನು ತಮ್ಮ ಮನೆಗೆ ಕರೆದುಕೊಂಡು ಬಂದರು. ಮಸಅಬ್ ಬಿನ್ ಉಮ್ಮೈರ್(ರ) ಹಾಗೂ ಅಸಅದ್ ಬಿನ್ ಝುರಾರ(ರ) ಅವರಿಬ್ಬರನ್ನು ಕರೆದುಕೊಂಡು ಬಂದರು. ಅವರಿಬ್ಬರು ಸಅದ್ ಬಿನ್ ಮುಆಝ್(ರ) ರವರ ಮನೆಯಲ್ಲಿಯೇ ಜನರನ್ನು ಇಸ್ಲಾಮ್ ಕಡೆ ಅಹ್ವಾನಿಸುತ್ತಿದ್ದರು. ಹಝ್ರತ್ ಸಅದ್ ಬಿನ್ ಮುಆಝ್ ಹಾಗೂ ಹಝ್ರತ್ ಅಸಅದ್ ಬಿನ್ ಝುರಾರ ಅವರಿಬ್ಬರು ತಾಯಿಯ ಕಡೆಯಿಂದ ಸಹೋದರರಾಗಿದ್ದರು. ಅನಂತರ ಸಅದ್ ಬಿನ್ ಮುಆದ್ ಮತ್ತು ಉಸೈದ್ ಬಿನ್ ಹಝೀರ್ ತಮ್ಮ ಕೈಗಳಿಂದ ತಮ್ಮ ಕೋಮಿನ ವಿಗ್ರಹಗಳನ್ನು ತುಂಡರಿಸಿದರು. ಒಂದೇ ಗೋತ್ರದವರಾಗಿದ್ದರಿಂದ ಇಡೀ ಗೋತ್ರವೂ ಅಸ್ಲಾಮ್ ಸ್ವೀಕರಿಸಿದ ನಂತರ ತಮ್ಮ ಖೌಮಿನ ವಿಗ್ರಹಗಳನ್ನು ತುಂಡರಿಸಿದರು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹಝ್ರತ್ ಸಅದ್ ಮತ್ತು ಹಝ್ರತ್ ಸಅದ್ ಬಿನ್ ಅಬಿ ವಖ್ಖಾಸ್(ರ) ರವರ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದರು. ಇನ್ನೊಂದು ವರದಿಯ ಪ್ರಕಾರ ಹಝ್ರತ್ ಅಬೂ ಉಬೈದಹ್ ಬಿನುಲ್ ಜರಹ್(ರ) ರವರೊಂದಿಗೆ ಸಹೋದರ ಸಂಬಂಧ ಸ್ಥಾಪಿಸಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–320–321, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990, ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–2, ಪುಟ–461, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003, ಅಲ್‌ಅಸಾಬ ಫೀ ತಮೀಝಿಸ್ಸಹಾಬ ಲಿಬ್ನೆ ಹಜರ್ ಅಸ್ಖಲಾನಿ, ಸಂಪುಟ–3, ಪುಟ–70, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1995)

ಹಝ್ರತ್ ಸಅದ್ ಬಿನ್ ಮುಆಝ್(ರ) ರವರು ಇಸ್ಲಾಮ್ ಸ್ವೀಕರಿಸಿದ ಘಟನೆಯನ್ನು ವಿವರಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಸಾಹೆಬ್‌ರವರು ಸೀರತ್ ಖಾತುಮುನ್ನಬಿಯೀನ್ ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ:

"ಮಕ್ಕದಿಂದ ಹೊರಡುವಾಗ ಆ ಹನ್ನೆರಡು ನವ ಮುಸ್ಲಿಮರು ಪ್ರವಾದಿ(ಸ) ಅವರ ಬಳಿ ನಮಗೆ ಓರ್ವ ವ್ಯಕ್ತಿಯನ್ನು ನಮ್ಮೊಂದಿಗೆ ಇಸ್ಲಾಮ್ ಧರ್ಮವನ್ನು ಬೋಧಿಸಲು ಕಳುಹಿಸಿಕೊಡಿ ಎಂದು ಕೇಳಿಕೊಂಡಾಗ ಪ್ರವಾದಿ ಮುಹಮ್ಮದ್(ಸ) ಅವರು ಹಝ್ರತ್ ಮುಸ್ಅಬ್(ರ) ಅವರನ್ನು ಕಳುಹಿಸಿದರು. ಅವರು ಬನೂ ಅಬ್ದುದ್ದಾರ್‌ನ ಓರ್ವ ನಿಷ್ಠಾವಂತ ಯುವಕರಾಗಿದ್ದರು. ಇಸ್ಲಾಮಿನ ಪ್ರಚಾರಕರನ್ನು ಅಂದಿನ ಕಾಲದಲ್ಲಿ ಖಾರಿ ಎಂದು ಕರೆಯುತ್ತಿದ್ದರು ಈ ಹೆಸರಲ್ಲೇ ಪ್ರಸಿದ್ಧರಾಗಿದ್ದರು. ಏಕೆಂದರೆ ಅವರ ಕೆಲಸ ಕೇವಲ ಪವಿತ್ರ ಖುರ್ಆನನ್ನು ಪಠಿಸುವುದಾಗಿತ್ತು. ಏಕೆಂದರೆ ಇದು ಇಸ್ಲಾಮ್ ಧರ್ಮದ ಬೋಧನೆಯ ಉತ್ತಮ ವಿಧಾನವಾಗಿತ್ತು. ಹೀಗೆ ಹಝ್ರತ್ ಮುಸ್ಅಬ್(ರ) ಯಸ್ರಬ್‌ನಲ್ಲಿ ಪ್ರಸಿದ್ಧರಾದರು.

ಮುಸ್ಅಬ್(ರ) ಮದೀನಕ್ಕೆ ತಲುಪಿ ಅಸ್ಅದ್ ಬಿನ್ ಝುರಾರ(ರ) ಅವರ ಮನೆಯಲ್ಲಿ ತಂಗಿದರು ಇವರು ಮದೀನದಲ್ಲಿ ಮೊಟ್ಟ ಮೊದಲು ಮುಸ್ಲಿಮರಾಗಿದ್ದರು ಮತ್ತು ನಿಷ್ಠಾವಂತ ಹಾಗೂ ಹಿರಿಯ ಗಣ್ಯವ್ಯಕ್ತಿ ಆಗಿದ್ದರು. ಈ ಮನೆಯನ್ನೆ ತಮ್ಮ ಪ್ರಚಾರದ ಕೇಂದ್ರವನ್ನಾಗಿಸಿದರು. ಮತ್ತು ತಮ್ಮ ಕಾರ್ಯದಲ್ಲಿ ನಿರತರಾದರು. ಹೀಗೆ ಅಲ್ಲಿ ಮುಸ್ಲಿಮರಿಗೆ ಒಗ್ಗಟ್ಟಾಗಿ ಜೀವನ ಸಾಗಿಸಲು ಸೌಭಾಗ್ಯ ಲಭಿಸಿತು. ಆದ್ದರಿಂದ ಅಸ್ಅದ್ ಬಿನ್ ಝುರಾರ(ರ) ಅವರ ಮಾರ್ಗದರ್ಶನದ ಮೆರೆಗೆ ಪ್ರವಾದಿ(ಸ) ಅವರು ಮುಸ್ಅಬ್(ರ) ಅವರಿಗೆ ಜುಮುಅ ನಮಾಝ್ ನಿರ್ವಹಿಸಲು ಉಪದೇಶ ನೀಡಿದರು. ಹೀಗೆ ಮುಸ್ಲಿಮರ ಜೊತೆಗೂಡಿ ಜೀವನ ಸಾಗಿಸಲು ಪ್ರಾರಂಭಿಸಿದರು. ಅಲ್ಲಾಹನ ಅನುಗ್ರಹದಿಂದ ಹಝ್ರತ್ ಮುಸ್ಅಬ್‌ರವರ ತಬ್ಲೀಗ್ ಕಾರಣದಿಂದ ಮದೀನದ ಮನೆ ಮನೆಗಳಲ್ಲಿ ಇಸ್ಲಾಮಿನ ಬಗ್ಗೆ ಚರ್ಚೆ ಪ್ರಾರಂಭವಾಯಿತು. ಔಸ್ ಮತ್ತು ಖಝ್ರಜ್ ಗೋತ್ರಗಳ ಜನರು ಬೇಗ ಬೇಗನೆ ಮುಸ್ಲಿಮರಾಗ ತೊಡಗಿದರು. ಕೆಲವು ಗೋತ್ರಗಳು ಪೂರ್ಣವಾಗಿ ಒಂದೇ ದಿನದಲ್ಲಿ ಇಸ್ಲಾಮ್ ಧರ್ಮಕ್ಕೆ ಸೇರಿದುವು. ಬನೂ ಅಬ್ದುಲ್ ಅಶ್ಹಲ್ ಗೋತ್ರವು ಒಮ್ಮೆಗೆ ಮುಸ್ಲಿಮರಾದ ಗೋತ್ರವಾಗಿತ್ತು. ಇದು ಅನ್‌ಸಾರ್‌ಗಳ ಔಸ್ ಗೋತ್ರದ ಒಂದು ಮುಖ್ಯ ಭಾಗವಾಗಿತ್ತು. ಅದರ ಮುಖಂಡರ ಹೆಸರು ಸಅದ್ ಬಿನ್ ಮುಆಝ್ ಎಂದಾಗಿತ್ತು. ಅವರು ಬನೂ ಅಬ್ದುಲ್ ಅಶ್ಹಲ್‌ನ ಸರ್ವೋನ್ನತ ಮುಖಂಡರಾಗಿದ್ದರಲ್ಲದೆ ಔಸ್ ಗೋತ್ರದ ನಾಯಕರೂ ಆಗಿದ್ದರು.

ಮದೀನದಲ್ಲಿ ಇಸ್ಲಾಮ್ ಬಗ್ಗೆ ಚರ್ಚೆ ಪ್ರಾರಂಭವಾದಾಗ ಸಅದ್ ಬಿನ್ ಮುಆಝ್‌ಗೆ ಅದು ಇಷ್ಟವಾಗಲಿಲ್ಲ. ಅವರು ಅದನ್ನು ತಡೆಗಟ್ಟಲು ಇಚ್ಛಿಸಿದರು (ಮುಸ್ಲಿಮರಾಗುವ ಮೊದಲು ಸಅದ್ ಬಿನ್ ಮುಆಝ್ ದೊಡ್ಡ ವಿರೋಧಿಯಾಗಿದ್ದರು). ಅವರಿಗೆ ಅಸ್ಅದ್ ಬಿನ್ ಝುರಾರರೊಂದಿಗೆ ಬಹಳ ಸಮೀಪದ ಸಂಬಂಧವಿತ್ತು. ಅವರು ಒಬ್ಬರಿನ್ನೊಬ್ಬರ ಚಿಕ್ಕಮ್ಮನ ಮಕ್ಕಳಾಗಿದ್ದರು. ಅಸ್ಅದ್ ಬಿನ್ ಝುರಾರ ಮುಸ್ಲಿಮರಾಗಿದ್ದರು. ಆದುದರಿಂದ ಸಅದ್ ಬಿನ್ ಮುಆಝ್ ನೇರವಾಗಿ ಈ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದರಿಂದ ದೂರ ಸರಿದು ಪರಸ್ಪರ ವೈಮನಸ್ಸು ಉಂಟಾಗದಂತೆ ನೋಡಿಕೊಂಡಿದ್ದರು. ಆದುದರಿಂದ ಅವರು ತನ್ನ ಇನ್ನೊಬ್ಬ ಸಂಬಂಧಿಕನಾದ ಉಸೈದ್ ಬಿನ್ ಅಲ್ ಹುಝೈರ್‌ರೊಂದಿಗೆ ಹೇಳಿದರು: ಅಸ್ಅದ್ ಬಿನ್ ಝುರಾರರ ಕಾರಣ ನನಗೆ ಮುಜುಗರವಾಗುತ್ತದೆ. ನೀವು ಹೋಗಿ ಮುಸ್ಅಬ್‌ರನ್ನು ತಡೆಯಿರಿ. ನಮ್ಮ ಜನರ ಮಧ್ಯೆ ಈ ಅಧರ್ಮ ಹಬ್ಬಿಸಬೇಡ ಎಂದು ಹೇಳಿರಿ. ಅಸ್ವದ್‌ನೊಂದಿಗೆ ಸಹ ಅವನು ಮಾಡುತ್ತಿರುವುದು ಸರಿಯಲ್ಲ ಎಂದು ಹೇಳಿರಿ. ಉಸೈದ್, ಅಬ್ದುಲ್ ಅಶ್ಹಲ್ ಗೋತ್ರದ ಗಣ್ಯ ಮುಖಂಡರಲ್ಲಿ ಒಬ್ಬರಾಗಿದ್ದರು.

ಸಅದ್ ಬಿನ್ ಮುಆಝ್ ನಂತರ ಉಸೈದರಿಗೂ ತನ್ನ ಗೋತ್ರದಲ್ಲಿ ಬಹಳ ಪ್ರಭಾವವಿತ್ತು. ಹಾಗೆ ಸಅದ್ ಹೇಳಿದ ಪ್ರಕಾರ ಉಸೈದ್, ಮುಸ್ಅಬ್ ಮತ್ತು ಅಸ್ಅದರ ಬಳಿಗೆ ಹೋದರು ಮತ್ತು ಮುಸ್ಅಬ್‌ರೊಂದಿಗೆ ಸಿಟ್ಟಿನಿಂದ ಹೇಳಿದರು: ನೀವು ನಮ್ಮ ಜನರನ್ನು ಧರ್ಮ ಭ್ರಷ್ಟರನ್ನಾಗಿ ಏಕೆ ಮಾಡುತ್ತಿರುವಿರಿ. ಹಾಗೆ ಮಾಡುವುದರಿಂದ ದೂರ ಸರಿಯದಿದ್ದರೆ ಒಳ್ಳೆಯದಾಗದು ಎಂದು ಹೇಳಿದರು. ಮುಸ್ಅಬ್ ಉತ್ತರ ಹೇಳುವ ಮೊದಲೆ ಅಸ್ಅದ್ ಮೆಲ್ಲಗೆ ಮುಸ್ಅಬ್‌ರೊಂದಿಗೆ ಹೇಳಿದರು, ಈ ವ್ಯಕ್ತಿ ತನ್ನ ಗೋತ್ರದ ಪ್ರಭಾವಶಾಲಿ ಮುಖಂಡರಾಗಿದ್ದಾರೆ. ಅವರೊಂದಿಗೆ ಮೃದುವಾಗಿಯೂ ಪ್ರೀತಿಯಿಂದಲೂ ಮಾತನಾಡಿರಿ. ಆಗ ಮುಸ್ಅಬ್ ಬಹಳ ಆದರ ಭಾವದಿಂದಲೂ ಪ್ರೀತಿಯಿಂದಲೂ ಉಸೈದರೊಂದಿಗೆ ಹೇಳಿದರು: ತಾವು ಸಿಟ್ಟುಗೊಳ್ಳಬೇಡಿರಿ. ದಯಮಾಡಿ ಸ್ವಲ್ಪ ಹೊತ್ತು ಇಲ್ಲಿ ಕುಳಿತುಕೊಂಡು ತಂಪಾದ ಹೃದಯದೊಂದಿಗೆ ನಮ್ಮ ಮಾತುಗಳನ್ನು ಆಲಿಸಿರಿ. ಅನಂತರ ನೀವು ನಿಮ್ಮ ಅಭಿಪ್ರಾಯ ಹೇಳಿರಿ. ಉಸೈದ್ ಅವರ ಮಾತು ಸರಿ ಎಂದು ಗ್ರಹಿಸಿ ಕುಳಿತುಕೊಂಡರು. ಅವರು ಸಾತ್ವಿಕ ಮನೋಭಾವ ಹೊಂದಿದವರಾಗಿದ್ದರು. ಹಝ್ರತ್ ಮುಸ್ಅಬ್ ಅವರಿಗೆ ಪವಿತ್ರ ಖುರ್ಆನ್ ಓದಿ ಕೇಳಿಸಿದರು. ಬಹಳ ಪ್ರೀತಿಯಿಂದ ಇಸ್ಲಾಮಿನ ತತ್ವಗಳನ್ನು ವಿವರಿಸಿಕೊಟ್ಟರು. ಆಗ ಉಸೈದ್ ಎಷ್ಟು ಪ್ರಭಾವಿತರಾದರೆಂದರೆ ಅವರು ಅಲ್ಲಿಯೇ ಮುಸ್ಲಿಮರಾದರು. ಅವರು ಹೇಳಿದರು: ನನ್ನ ಬಳಿಕ ಇನ್ನೊಬ್ಬ ವ್ಯಕ್ತಿ ಇದ್ದಾರೆ, ಅವರು ಮುಸ್ಲಿಮರಾದರೆ ನಮ್ಮ ಗೋತ್ರ ಸಂಪೂರ್ಣವಾಗಿ ಮುಸ್ಲಿಮರದಾಗುವುದು. ನೀವು ಇಲ್ಲೇ ಇರಿ. ನಾನು ಅವರನ್ನು ನಿಮ್ಮ ಬಳಿಗೆ ಕಳುಹಿಸುತ್ತೇನೆ. ಉಸೈದ್ ಹೋಗಿ ಉಪಾಯದಿಂದ ಸಅದ್ ಬಿನ್ ಮುಆಝರನ್ನು ಹಝ್ರತ್ ಮುಸ್ಅಬ್ ಮತ್ತು ಅಸ್ಅದರ ಬಳಿಗೆ ಕಳುಹಿಸಿದರು. ಆಗ ಮುಸ್ಅಬ್ ಅವರಿಗೆ ಅದೇ ರೀತಿ ಬಹಳ ಮೃದುವಾಗಿಯೂ ಪ್ರೀತಿಯಿಂದಲೂ ಪ್ರಚಾರ ಮಾಡಿದರು. ಸಅದ್ ಬಿನ್ ಮುಆಝ್ ವಿಧೇಯರಾದರು. ಸಅದ್ ಸ್ನಾನ ಮಾಡಿ ಶಹಾದತ್ ಕಲಿಮ ಪಠಿಸಿದರು. ಅನಂತರ ಸಅದ್ ಬಿನ್ ಮುಆಝ್(ರ) ಮತ್ತು ಉಸೈದ್ ಜೊತೆ ಸೇರಿ ತಮ್ಮ ಗೋತ್ರದ ಜನರ ಬಳಿಗೆ ಹೋದರು. ಸಅದ್ ತನ್ನ ಗೋತ್ರದವರೊಂದಿಗೆ ಅರಬಿ ಸಂಪ್ರದಾಯ ಪ್ರಕಾರ ಕೇಳಿದರು: ಬನೀ ಅಬ್ದುಲ್ ಅಶ್ಅಲ್ ಗೋತ್ರದ ಜನರೇ, ನೀವು ನನ್ನನ್ನು ಹೇಗೆ ಪರಿಗಣಿಸುತ್ತಿರುವಿರಿ? ಅವರೆಲ್ಲರೂ ಒಮ್ಮತದಿಂದ ಹೇಳಿದರು: ನೀವು ನಮ್ಮ ನಾಯಕರಾಗಿದ್ದೀರಿ. ನೀವು ನಮ್ಮ ನಾಯಕರ ಪುತ್ರನಾದ ನಾಯಕರಾಗಿದ್ದೀರಿ. ನಿಮ್ಮ ಮಾತು ನಮಗೆ ವಿಶ್ವಾಸಾರ್ಹವಾಗಿದೆ. ಆಗ ಸಅದ್ ಹೇಳಿದರು: ನೀವು ಅಲ್ಲಾಹನನ್ನೂ ಅವನ ಸಂದೇಶವಾಹಕರನ್ನು ನಂಬುವ ತನಕ ನನ್ನೊಂದಿಗೆ ನಿಮ್ಮ ಸಂಬಂಧವಿರಲಾರದು. ಅನಂತರ ಸಅದ್ ಆ ಜನರಿಗೆ ಇಸ್ಲಾಮೀ ತತ್ವಗಳನ್ನು ವಿವರಿಸಿಕೊಟ್ಟರು. ಆ ದಿನ ಸಾಯಂಕಾಲದೊಳಗೆ ಆ ಗೋತ್ರದ ಎಲ್ಲರೂ ಮುಸ್ಲಿಮರಾದರು. ಸಅದ್ ಮತ್ತು ಉಸೈದ್ ತಮ್ಮ ಕೈಗಳಿಂದ ತಮ್ಮ ಗೋತ್ರದ ಜನರು ಪೂಜಿಸುತ್ತಿದ್ದ ವಿಗ್ರಹಗಳನ್ನು ತುಂಡರಿಸಿದರು.

ಸಅದ್ ಬಿನ್ ಮುಆಝ್ ರಝಿಅಲ್ಲಾಹು ಅನ್ಹು ಮತ್ತು ಉಸೈದ್ ಬಿನ್ ಹಝೀರ್(ರ) ಇವರಿಬ್ಬರು ಆ ದಿವಸ ಮುಸ್ಲಿಮರಾದರು ಇವರಿಬ್ಬರನ್ನು ಗಣ್ಯ ಸಹಾಬರವರಲ್ಲಿ ಪರಿಗಣಿಸಲಾಗುತ್ತದೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಬರೆಯುತ್ತಾರೆ "ನಿಸ್ಸಂದೇಹವಾಗಿ ಅನ್ಸಾರ್‌ಗಳಲ್ಲಿ ಇವರಿಬ್ಬರ ಸ್ಥಾನವು ಬಹಳ ಉನ್ನತವಾಗಿತ್ತು. ವಿಷೇಶವಾಗಿ ಸಅದ್ ಬಿನ್ ಮುಆಝ್(ರ) ಅವರು ಅನ್ಸಾರ್‌ಗಳಲ್ಲಿ ಎಂತಹ ಸ್ಥಾನಗಳಿಸಿದ್ದರು ಎಂದರೆ ಮುಹಾಜಿರೀನರಲ್ಲಿ

ಹಝ್ರತ್ ಅಬೂಬಕ್ಕರ್(ರ) ಅವರಿಗಿದ್ದ ಸ್ಥಾನ ಅವರಿಗಿತ್ತು. ಈ ಯುವಕ ಬಹಳ ನಿಷ್ಠಾವಂತ ಮತ್ತು ಇಸ್ಲಾಮ್ ಹಾಗೂ ಇಸ್ಲಾಮಿನ ಸಂಸ್ಥಾಪಕರ ಪ್ರೇಮಿ ಆದರು. ಅವರು ತಮ್ಮ ಗೋತ್ರದಲ್ಲಿ ಐಶ್ವರ್ಯವಂತರಾಗಿದ್ದರು ಮತ್ತು ಬಹಳ ಜ್ಞಾನವುಳ್ಳವರಾಗಿದ್ದರಿಂದ ಇಸ್ಲಾಮ್‌ನಲ್ಲಿಯು ಸಹ ಬಹಳ ಉನ್ನತ ಹಾಗೂ ವಿಶೇಶ ಪದವಿಯನ್ನು ಗಳಿಸಿದ್ದರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್(ರ) ಬರೆಯುತ್ತಾರೆ: ನಿಸ್ಸಂದೇಹವಾಗಿಯು. ಅವರ ಯೌವನದ ವಯಸ್ಸಿನಲ್ಲಿ ಮೃತ್ಯುವನ್ನು ಕಂಡು ಹುಝೂರ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೀಗೆ ಹೇಳಿದರು ಸಅದ್(ರ) ಅವರ ನಿಧನಕ್ಕೆ ಕಾರುಣ್ಯ ನಿಧಿಯಾದ ಅಲ್ಲಾಹನ (ಅರ್ಷ್) ಪೀಠವು ಸಹ ಅಲ್ಲಗಳಿತು. ಒಂದು ಸುದೀರ್ಘ ಸತ್ಯವನ್ನು ಅವಲಂಭಿಸಿತು.

ಹೀಗೆ ಬಹಳ ಬೇಗ ಬೇಗನೇ ಔಸ್ ಹಾಗೂ ಖಝ್ರುಜ್ ಗೋತ್ರಗಳಲ್ಲಿ ಇಸ್ಲಾಮ್ ಹರಡಿತು. ಯಹೂದಿಯರು ಬಹಳ ಭಯಭೀತರಾಗಿ ಈ ದೃಶ್ಯವನ್ನು ಕಾಣುತ್ತಿದ್ದರು ಮತ್ತು ಮನಸ್ಸಿನಲ್ಲೇ ಮುಂದೆ ಏನಾಗುವುದು ಎಂದು ಭಾವಿಸುತ್ತಿದ್ದರು. (ಸೀರತ್ ಖಾತಮುನ್ನಬಿಯೀನ್ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಎಂ. ಎ, ಪುಟ–224–227, ಫರ್ಹಂಗ್ ಸೀರತ್, ಪುಟ–60, ಝುವಾರ ಅಕಾಡಮಿ ಕರಾಚಿ 2003)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್(ರ) ತಮ್ಮ ಗ್ರಂಥ ಸೀರತ್ ಖಾತಮುನ್ನಬೀಯೀನ್‌ನಲ್ಲಿ ಇನ್ನೊಂದು ಕಡೆ ವಿವರಾತ್ಮಕವಾಗಿ ಹೀಗೆ ಬರೆಯುತ್ತಾರೆ: ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಮದೀನಕ್ಕೆ ಆಗಮಿಸಿ ಬಹಳ ದಿವಸ ಇನ್ನು ಕಳೆದಿರಲಿಲ್ಲ ಮಕ್ಕದ ಖುರೈಶ್‌ರವರಿಂದ ಅಬ್ದುಲ್ಲಾ ಬಿನ್ ಅಬಿ ಸುಲೂಲ್ ಖಝ್ರಜ್‌ನ ಸರದಾರ ಹಾಗೂ ಮುಶ್ರಿಕ್ ಜನರ ಹೆಸರಲ್ಲಿ ಮಕ್ಕದ ಜನರ ಕಡೆಯಿಂದ ಭಯಪಡಿಸುವ ಒಂದು ಪತ್ರ ತಲುಪಿತು ಅಂದರೆ ನೀವೆಲ್ಲರು ಮುಹಮ್ಮದ್(ಸ) ರವರ ಆಶ್ರಯದಿಂದ ಹೊರಬರಬೇಕು ಇಲ್ಲವಾದಲ್ಲಿ ನಿಮಗೆ ಬಹಳ ತೊಂದರೆಗಳನ್ನು ಅನುಭವಿಸಬೇಕಾಗುವುದು. ಆ ಪತ್ರದಲ್ಲಿ ಹೀಗೆ ಬರೆಯಲಾಗಿತ್ತು: ನೀವೆಲ್ಲರು ನಮ್ಮ ವ್ಯಕ್ತಿ ಮುಹಮ್ಮದ್(ಸ) ರವರಿಗೆ ಆಶ್ರಯ ನೀಡಿದ್ದೀರಿ ಆದ್ದರಿಂದ ನಾವು ದೇವರಾಣೆ ಹಾಕಿ ಹೇಳುತ್ತೇವೆ ನೀವು ಅವರನ್ನು ಬೆಂಬಲಿಸುವುದನ್ನು ಬಿಟ್ಟು ಆತನ ವಿರುದ್ಧ ಯುದ್ಧವಾಡಬೇಕು ಅಥವಾ ಕನಿಷ್ಠ ಪಕ್ಷ ಆತನನ್ನು ನಿಮ್ಮ ಪಟ್ಟಣದಿಂದ ಹೊರಹಾಕಬೇಕು ಇಲ್ಲದಿದ್ದರೆ ನಾನು ನಮ್ಮ ಸಂಪೂರ್ಣ ಸೈನ್ಯದೊಂದಿಗೆ ನಿಮ್ಮ ಮೇಲೆ ಆಕ್ರಮಣ ಮಾಡುವೆವು ಮತ್ತು ನಿಮ್ಮ ಎಲ್ಲಾ ಪುರುಷರನ್ನು ಖಡ್ಗದಡಿ ಮಾಡಿ ನಿಮ್ಮೆಲ್ಲರ ಮಹಿಳೆಯರನ್ನು ನಮ್ಮ ವಶದಲ್ಲಿರಿಸಿ ಅವರನ್ನು ನಮಗಾಗಿ ಧರ್ಮ ಸಮ್ಮತಗೊಳಿಸುವೆವು.

ಮದೀನಕ್ಕೆ ಈ ಪತ್ರ ತಲುಪಿದಾಗ ಅಬ್ದುಲ್ಲಾ ಮತ್ತು ಆತನ ಸಂಗಡಿಗರು ಮೊದಲಿನಿಂದಲೂ ಮನಸ್ಸಿನಲ್ಲಿ ಇಸ್ಲಾಮಿನ ವಿರೋಧಿಯಾಗಿದ್ದರು. ಅವರಲ್ಲಿ ಪ್ರವಾದಿ ಮುಹಮ್ಮದ್(ಸ) ರವರ ವಿರುದ್ಧ, ಇಸ್ಲಾಮ್ ವಿರುದ್ಧ ಅಸೂಯೆ ಹುಟ್ಟಿತು. ಅವರೆಲ್ಲರು ರಸೂಲುಲ್ಲಾಹ್(ಸ) ರವರ ವಿರುದ್ಧ ಯುದ್ಧ ಮಾಡಲು ಸಿದ್ಧತೆ ನಡೆಸಿದರು. ಪ್ರವಾದಿ ಮುಹಮ್ಮದ್(ಸ) ಅವರಿಗೆ ಇದರ ಬಗ್ಗೆ ಸಮಾಚಾರ ತಿಳಿದಾಗ ಅವರು ತಕ್ಷಣವೇ ಅವರೆಲ್ಲರನ್ನು ಭೇಟಿಯಾದರು. ಅಬ್ದುಲ್ಲ ಬಿನ್ ಅಬಿ ಬಿನ್ ಸುಲೂಲ್ ಮತ್ತು ಆತನ ಸಂಗಡಿಗರನ್ನು ಬೇಟಿಯಾಗಿ ಸಮಜಾಯಿಸಿದರು, ಒಂದು ವೇಳೆ ನೀವು ನನ್ನೊಂದಿಗೆ ಯುದ್ಧ ಮಾಡಿದರೆ ಅವರಲ್ಲಿ ನಿಮ್ಮ ಸಂಬಂಧಿಕರು ಸಹೋದರರು ನಿಮ್ಮ ಎದುರಲ್ಲಿ ನಿಲ್ಲುವರು. ಇವರಲ್ಲಿ ಮುಸ್ಲಿಮರಾದವರೆಲ್ಲರು ನಿಮ್ಮ ಗೋತ್ರದವರೇ ಆಗಿದ್ದಾರೆ, ನಿಮ್ಮ ಪಟ್ಟಣದ ಜನರಾಗಿದ್ದಾರೆ, ಮತ್ತು ಯುದ್ಧವಾದಾಗ ಈ ಜನರೇ ನನ್ನ ಕಡೆಯಿಂದ ಯುದ್ಧವಾಡುತ್ತಾರೆ. ಅಂದರೆ ಔಸ್ ಮತ್ತು ಖಝ್ರಜ್ ಗೋತ್ರದವರು ನನ್ನನ್ನೇ ಬೆಂಬಲಿಸುವರು. ರಸೂಲುಲ್ಲಾಹ್(ಸ) ಅವರನ್ನು ಸಂಬೋಧಿಸಿ ಹೇಳಿದರು: ನನ್ನೊಂದಿಗೆ ಯುದ್ಧ ಮಾಡಬೇಕು ಎಂದಲ್ಲಿ ಅದರ ಅರ್ಥ ಕೇವಲ ನೀವು ನಿಮ್ಮ ಬಂಧು ಬಳಗದವರ ವಿರುದ್ಧವೇ ಖಡ್ಗಗಳನ್ನು ಎತ್ತುವವರಾಗುವಿರಿ. ಈಗ ನೀವೆ ಇದರ ಬಗ್ಗೆ ಯೋಚನೆ ಮಾಡಿರಿ. ಅಬ್ದುಲ್ಲಾ ಹಾಗೂ ಆತನ ಸಂಗಡಿಗರ ಮನಸ್ಸಿನಲ್ಲಿ ಇನ್ನೂ ಬುಆಸ್ ಯುದ್ಧದ ನೆನಪು ಇನ್ನೂ ತಾಜವಾಗಿತ್ತು. ಪರಸ್ಪರ ಇವರಿಬ್ಬರು ಯುದ್ಧವಾಡುತ್ತಿದ್ದರು. ಈ ಯುದ್ಧದ ಕಾರಣದಿಂದ ಬಹಳ ಅನಾಹುತಗಳಾಗಿದ್ದವು. ಅವರಿಗೆ ಮತ್ತೊಮ್ಮೆ ಪರಸ್ಪರ ಯುದ್ಧವಾಡಬೇಕಾಗುವುದು ಎಂದು ತಿಳಿದುಬಂತು ಹೀಗೆ ಅವರು ಈ ಯುದ್ಧದಿಂದ ದೂರವಾದರು.

ಖುರೈಶ್‌ರಿಗೆ ಅವರ ಈ ಉಪಾಯದಲ್ಲಿ ಯಶಸ್ಸು ಸಿಗದಿದ್ದಾಗ ಅವರು ಇಂತಹದ್ದೇ ಒಂದು ಪತ್ರ ಮದೀನದ ಯಹೂದಿಯವರಿಗೆ ಕಳುಹಿಸಿದರು. ಮಕ್ಕದ ಕುಫ್ಫಾರರು ಇದರಿಂದ ಉದ್ದೇಶ ಏನಾಗಿತ್ತು ಎಂದರೆ ಅವರು ಇಸ್ಲಾಮ್ ಧರ್ಮವನ್ನು ಹೇಗಾದರು ಮಾಡಿ ನಶಿಸಬೇಕು ಎಂದು ಬಯಸುತ್ತಿದ್ದರು. ಲೋಕದಿಂದ ಅವರ ಇಸ್ಲಾಮ್ ಧರ್ಮವನ್ನೆ ನಶಿಸಿ ಹೋಗಬೇಕು ಎಂದಾಗಿತ್ತು. ಮುಸ್ಲಿಮರು ಅವರ ಹಿಂಸೆಗಳಿಂದ ನಿಸ್ಸಹಾಯಕರಾಗಿ ಅಬೀಸೀನಿಯಕ್ಕೆ ಹೋದರು. ಅಬೀಸೀನಿಯಕ್ಕೆ ಮೊದಲ ಹಿಜ್ರತ್ ಆದಾಗ ಅಲ್ಲಿ ಅವರು ಅಂದರೆ ಕಾಫಿರ್‌ಗಳು ಅವರನ್ನು ಹಿಂಬಾಲಿಸಿದರು. ಅವರು ಮೊದಲ ದಿನದಿಂದಲೇ ಹಿಂಸೆಗೆ ಒಳಗಾದ ಈ ಬಡ ಜನರು, ನಜ್ಜಾಶಿಯು ಮಕ್ಕದವರನ್ನು ಹಿಂದಿರುಗಿಸಲಿ ಎಂದು ಪ್ರಯತ್ನಿಸುತ್ತಿದ್ದರು. ತದನಂತರ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಮಕ್ಕದಿಂದ ಹಿಜ್ರತ್ ಮಾಡಿ ಮದೀನಕ್ಕೆ ಆಗಮಿಸಿದಾಗ ಖುರೈಶರು ರಸೂಲುಲ್ಲಾಹ್(ಸ) ಹಿಂಬಾಲಿಸಿ ಅವರನ್ನು ಸೆರೆಹಿಡಿಯಲು ಬಹಳ ಪ್ರಯತ್ನಿಸಿದರು. ಹೀಗೆ ಅವರು ಪ್ರತಿಯೊಂದು ರೀತಿಯಲ್ಲಿ ಪ್ರವಾದಿ ಮುಹಮ್ಮದ್(ಸ) ಹಾಗೂ ಇಸ್ಲಾಮ್ ಧರ್ಮವನ್ನು ನಶಿಸುವುದಕ್ಕೆ ಪ್ರಯತ್ನಿಸಿದರು. ತದನಂತರ ಅವರಿಗೆ ಪ್ರವಾದಿ ಮುಹಮ್ಮದ್(ಸ) ಹಾಗೂ ಅವರ ಸಂಗಡಿಗರು ಮದೀನಕ್ಕೆ ತಲುಪಿದರು ಮತ್ತು ಅಲ್ಲಿ ಇಸ್ಲಾಮ್ ಧರ್ಮವು ಬಹಳ ವೇಗದಿಂದ ಹರಡುತ್ತಿದೆ ಎಂಬ ಸಮಾಚಾರ ತಿಳಿದಾಗ ಅವರು ಈ ಭಯಹುಟ್ಟಿಸುವ ಪತ್ರವನ್ನು ಕಳುಹಿಸಿ ಮದೀನದಿಂದ ಹೊರಹಾಕುವುದಕ್ಕೆ ಹೇಳಿದರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಎಂ.ಎ ಬರೆಯುತ್ತಾರೆ: ಖುರೈಶರು ಬರೆದ ಈ ಪತ್ರದಿಂದ ನಮಗೆ ಅರಬರ ಒಂದು ಪರಂಪರೆಯ ಬಗ್ಗೆಯು ತಿಳಿದು ಬರುತ್ತದೆ. ಅದೇನೆಂದರೆ ಅವರು ತಮ್ಮ ಯುದ್ಧಗಳಲ್ಲಿ ತಮ್ಮ ವೈರಿಗಳೊಂದಿಗೆ ವೈರಿಗಳ ಎಲ್ಲಾ ಪುರುಷರನ್ನು ಕೊಂದು ಅವರ ಮಹಿಳೆಯರನ್ನು ತಮ್ಮ ವಶದಲ್ಲಿ ಪಡೆದು ಅವರನ್ನು ತಮಗಾಗಿ ಧರ್ಮ ಸಮ್ಮತಗೊಳಿಸುತ್ತಿದ್ದರು. ಅದೇ ರೀತಿ ಮುಸ್ಲಿಮರ ವಿರುದ್ಧ ಅವರ ಭಾವನೆಗಳು ಅದಕ್ಕಿಂತ ಹೆಚ್ಚು ನಿಷ್ಠೂರವಾಗಿದ್ದವು ಏಕೆಂದರೆ ಈ ಶಿಕ್ಷೆಯು ಅವರು ಮುಸ್ಲಿಮರಿಗೆ ಆಶ್ರಯ ನೀಡುವವರಿಗೆ ನೀಡಬೇಕಾದರೆ ಮುಸ್ಲಿಮರಿಗೆ ನಿಸ್ಸಂದೇಹವಾಗಿಯು ಅವರು ಅದಕ್ಕಿಂತ ಹೆಚ್ಚು ಕಠೋರ ಶಿಕ್ಷೆ ನೀಡಲು ಬಯಸುತ್ತಿದ್ದರು. ಏನೇ ಇರಲಿ ಖುರೈಶರ ಈ ಪತ್ರ ಯಾವುದೇ ತಾತ್ಕಾಲಿಕ ಆವೇಶದ ಕಾರಣವಾಗಿರಲಿಲ್ಲ ಬದಲಿಗೆ ಅವರು ಶಾಶ್ವತವಾಗಿ ಇದರ ಬಗ್ಗೆ ನಿರ್ಣಯಿಸಿದ್ದರು. ಅಂದರೆ ಮುಸ್ಲಿಮರನ್ನು ನೆಮ್ಮದಿಯಿಂದ ಕುಳಿತುಕೊಳ್ಳಲು ಬಿಡುವುದಿಲ್ಲ ಮತ್ತು ಇಸ್ಲಾಮ್ ಧರ್ಮವನ್ನು ಲೋಕದಿಂದ ನಾಶ ಮಾಡುವೆವು ಎಂದು. ಆದ್ದರಿಂದ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್(ರ) ತಮ್ಮ ಗ್ರಂಥದಲ್ಲಿ ಈ ಘಟನೆಯ ಬಗ್ಗೆ ಬರೆಯುತ್ತಾರೆ:

ಈ ಐತಿಹಾಸಿಕ ಘಟನೆಯು ಮಕ್ಕದ ರಕ್ತಪಾತದ ಇರಾದೆಗಳ ಬಗ್ಗೆ ತಿಳಿಸುತ್ತದೆ. ಆ ಘಟನೆಯು ಹೀಗಿದೆ ಇದನ್ನು ಬುಖಾರಿಯಲ್ಲಿಯು ವರದಿ ಆಗಿದೆ: ಹಿಜ್ರತ್‌ನ ಕೆಲವು ದಿನಗಳ ನಂತರ ಸಅದ್ ಬಿನ್ ಮುಆಝ್(ರ) ಅವರು ಔಸ್ ಗೋತ್ರದ ಮುಖಂಡರಾಗಿದ್ದರು ಮತ್ತು ಮುಸ್ಲಿಮರಾಗಿದ್ದರು ಉಮ್ರ ಅನುಷ್ಠಿಸಲು ಮಕ್ಕಕ್ಕೆ ಹೋಗಿದ್ದರು ಮತ್ತು ತಮ್ಮ ಅಜ್ಞಾನ ಕಾಲದ ಗೆಳಯ ಹಾಗೂ ಹಳೆಕಾಲದಲ್ಲಿ ಉಮಯ್ಯ ಬಿನ್ ಖಲಫ್ ಮಕ್ಕದ ಸರದಾರ ಅವರ ಗೆಳೆಯ ಆಗಿದ್ದನು. ಅವರು ಅವನ ಬಳಿ ಹೋಗಿ ತಂಗಿದರು. ಏಕೆಂದರೆ ಅವರಿಗೆ ಅರಿವಿತ್ತು ಅವರು ಒಬ್ಬಂಟಿಯಾಗಿ ಉಮ್ರ ಅನುಷ್ಠಿಸಲು ಹೋದರೆ ಮಕ್ಕದ ಜನರು ಅವಶ್ಯಕವಾಗಿ ಅವರೊಂದಿಗೆ ಕೀಟಲೆ ಮಾಡುವರು ಎಂದು. ಆದ್ದರಿಂದ ಅವರು ಇದರಿಂದ ಉಳಿಯಲು ಉಮಯ್ಯಾಗೆ ಹೇಳಿದರು ನಾನು ಕಅಬದ ಪ್ರದಕ್ಷಿಣೆ ಮಾಡಬೇಕೆಂದು ಬಯಸುತ್ತೇನೆ. ಆದ್ದರಿಂದ ನೀವು ನನ್ನೊಂದಿಗೆ ಪ್ರದಕ್ಷಿಣೆ ಮಾಡಿಸಿರಿ ನಂತರ ನಾನು ಶಾಂತಿಯಿಂದ ನನ್ನ ಪ್ರದೇಶಕ್ಕೆ ಮರಳಿ ಹೋಗುವೆನು ಎಂದರು. ತದನಂತರ ಉಮಯ್ಯ, ಸಅದ್ ಅವರನು ಕರೆದುಕೊಂಡು ಮಧ್ಯಾಹ್ನದ ಹೊತ್ತು ಕಅಬದ ಬಳಿ ಬಂದು ತಲುಪಿದರು. ಆದರೆ ಆಕಸ್ಮಿಕವಾಗಿ ಅಬೂಜಹಲ್ ಅಲ್ಲಿಗೆ ಬಂದನು. ಆತನು ಸಅದ್ ಅವರನ್ನು ಕಂಡಾಗ ಆತನ ಕೋಪ ನೆತ್ತಿಗೇರಿತು. ಆತನು ಉಮಯ್ಯನಿಗೆ ಕೇಳಿದನು ಎಲೈ ಅಬೂ ಸಫ್ವಾನ್!! ನಿಮ್ಮೊಂದಿಗೆ ಇರುವ ಈ ವ್ಯಕ್ತಿ ಯಾರು? ಉಮಯ್ಯ ಹೇಳಿದರು ಇವರು ಸಅದ್ ಬಿನ್ ಮುಆಝ್(ರ) ಔಸ್ ಗೋತ್ರದ ಸರದಾರ ಆಗಿದ್ದಾರೆ. ಇದಕ್ಕೆ ಅಬೂಜಹಲ್ ಬಹಳ ಸಿಟ್ಟಿನಿಂದ ಸಅದ್ ಅವರನ್ನು ಉದ್ದೇಶಿಸಿ ಹೇಳಿದನು ಏನು ನೀವೆಲ್ಲರು ಈ ಧರ್ಮಭ್ರಷ್ಟನಾದ (ನೌಝುಬಿಲ್ಲಾಹ್) ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಆಶ್ರಯ ನೀಡಿದ ನಂತರ ನೀವೆಲ್ಲರು ಶಾಂತಿಯಿಂದ ಕಅಬದ ಪ್ರದಕ್ಷಿಣೆ ಮಾಡುವಿರಿ ಎಂದು ಭಾವಿಸುತ್ತೀರ. ಅಲ್ಲಾಹನ ಆಣೆ ಒಂದು ವೇಳೆ ನಿನ್ನೊಂದಿಗೆ ಅಬೂ ಸಫ್ವಾನ್ ಇರುತ್ತಿರಲಿಲ್ಲವಾದರೆ ನೀನು ನಿಮ್ಮ ಮನೆಯವರ ಬಳಿ ಜೀವಂತವಾಗಿ ಹೋಗುತ್ತಿರಲಿಲ್ಲ. ಸಅದ್ ಬಿನ್ ಮುಆಝ್(ರ) ಅವರು ವಾದ ವಿವಾದದಿಂದ ಹಿಂಜರಿಯುವವರಾಗಿದ್ದರು. ಆದರು ಅವರಲ್ಲಿಯು ಆ ರಾಷ್ಟ್ರದ ರಕ್ತವೇ ಹರಿಯುತ್ತಿತ್ತು ಅವರು ಉತ್ಸಾಹ ಭರಿತರಾಗಿ ಹೇಳಿದರು: ಅಲ್ಲಾಹನ ಆಣೆ!! ಒಂದು ವೇಳೆ ನೀನು ನಮಗೆ ಕಅಬದಿಂದ ತಡೆದರೆ ನೆನಪಿಡಿರಿ ನಿನಗೂ ಸಹ ಸೀರಿಯಾದ ಮಾರ್ಗದಲ್ಲಿ ಶಾಂತಿ ಸಿಗುವುದಿಲ್ಲ. ನಾವು ಸಹ ಮಾರ್ಗಗಳಲ್ಲಿ ಕುಳಿತುಕೊಳ್ಳುವೆವು. ನಿಮ್ಮ ವಿರುದ್ಧ ಬಹಳಷ್ಟು ಮಾಡುವೆವು. ಉಮಯ್ಯ ಅವರ ಈ ವಾದ ವಿವಾದವನ್ನು ಆಲಿಸುತ್ತಿದ್ದನು. ಹೇಳಿದನು: ಎಲೈ ಸಅದ್ ನೋಡಿರಿ!! ಅಬುಲ್ ಹಕಮ್‌ನ ವಿರುದ್ಧ ಹೀಗೆ ತಮ್ಮ ಧ್ವನಿ ಏರಿಸಬೇಡಿರಿ ಅಂದರೆ ಮಕ್ಕದವರು ಅಬೂಜಹಲ್‌ನನ್ನು ಅಬುಲ್‌ಹಕಮ್ ಎಂದು

ಕರೆಯುತ್ತಿದ್ದರು, ಇವರು ಮಕ್ಕದ ಸರದಾರರಾಗಿದ್ದಾರೆ. ಆತನ ಮುಂದೆ ಹೀಗೆ ತಮ್ಮ ಧ್ವನಿ ಏರಿಸಬೇಡಿ. ಸಅದ್(ರ) ಸಹ ಕೊಪದಲ್ಲಿದ್ದರು ಅವರು ಈ ಮಾತುಗಳನ್ನು ಆಲಿಸಿ ಉಮಯ್ಯಗೆ ಹೇಳಿದರು ಉಮಯ್ಯ!! ನೀವು ಈ ವಿಷಯಕ್ಕೆ ತಲೆಹಾಕಬೇಡಿ. ಅಲ್ಲಾಹನ ಆಣೆ!! ನನಗೆ ಪ್ರವಾದಿ ಸಲ್ಲಲ್ಲಹು ಅಲೈಹಿವಸಲ್ಲಮರು ನೀನು ಓರ್ವ ಮುಸ್ಲಿಮನ ಕೈಯಿಂದ ಕೊಲ್ಲಲ್ಪಡುವೆನು ಎಂಬ ಭವಿಷ್ಯವಾಣಿಯನ್ನು ಮರಿಯುವುದಕ್ಕೆ ಸಾಧ್ಯವಿಲ್ಲ. ಆಂದರೆ ಉಮಯ್ಯ ಓರ್ವ ಮುಸ್ಲಿಮನ ಕೈಯಿಂದ ಕೊಲ್ಲಲ್ಪಡುವನು. ಈ ಮಾತನ್ನು ಆಲಿಸಿ ಉಮಯ್ಯ ಬಿನ್ ಖಲಫ್ ಗಾಬರಿಗೊಂಡನು. ಮನೆಗೆ ತಲುಪಿದ ನಂತರ ಆತನು ತನ್ನ ಪತ್ನಿಯನ್ನು ಸಅದ್(ರ) ರವರ ಈ ಮಾತಿನ ಬಗ್ಗೆ ತಿಳಿಸಿ ಹೇಳಿದನು ಅಲ್ಲಾಹಆಣೆ!! ನಾನು ಮುಸ್ಲಿಮರ ವಿರುದ್ಧ ಮಕ್ಕದಿಂದ ಹೊರ ಹೋಗುವುದಿಲ್ಲ. ಆತನಿಗೆ ಪ್ರವಾದಿ(ಸ) ರವರ ಮಾತುಗಳ ಸತ್ಯ ಮತ್ತು ಅವರು ನುಡಿದಿರುವ ಭವಿಷ್ಯವಾಣಿಗಳು ಪೂರ್ಣಗೊಂಡಿದೆ ಎಂಬ ಅರಿವಿತ್ತು. ಆದರೆ ತಖ್‌ದೀರ್ ಪೂರ್ಣಗೊಳ್ಳಬೇಕಾಗಿತ್ತು ಬದರ್ ಯುದ್ಧದ ನಂಧರ್ಭದಲ್ಲಿ ಉಮಯ್ಯ ಮಕ್ಕದಿಂದ ಹೊರಬರಬೇಕಾಯಿತು ಅಲ್ಲಿ ಆತನು ಮುಸ್ಲಿಮರ ಕೈಯಿಂದ ಕೊಲ್ಲಲ್ಪಟ್ಟನು. ಉಮಯ್ಯ ಹಝ್ರತ್ ಬಿಲಾಲ್(ರ) ರವರನ್ನು ಇಸ್ಲಾಮ್‌ನ ಕಾರಣದಿಂದ ಹಿಂಸಿಸುತ್ತಿದ್ದ ವ್ಯಕ್ತಿ ಆಗಿದ್ದನು. (ಸೀರತ್ ಖಾತುಮುನ್ನಬೀಯೀನ್, ಸಂಪುಟ–280–282)

ಸಹೀಹ್ ಬುಖರಿಯಲ್ಲಿ ಒಂದು ವರದಿ ಹೀಗಿದೆ: ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ವರದಿ ಮಾಡುತ್ತಾರೆ: ಹಝ್ರತ್ ಸಅದ್ ಬಿನ್ ಮುಆಝ್(ರ) ಅವರು ಉಮ್ರ ಅನುಷ್ಠಿಸಲು ಮಕ್ಕಕ್ಕೆ ಹೋಗಿದ್ದರು. ಅವರು ಉಮಯ್ಯ ಬಿನ್ ಖಲಫ್ ಮಕ್ಕದ ಸರದಾರನ ಬಳಿ ಹೋಗಿ ತಂಗಿದರು. ಹಳೆ ಪರಿಚಯವಿತ್ತು. ಆತನ ಬಳಿ ಉಳಿಯಲು ಕಾರಣ ಶಾಂತಿಯಿಂದ ಉಮ್ರ ಅನುಷ್ಠಿಸುವುದಾಗಿತ್ತು. ಉಮಯ್ಯಾ ಸೀರಿಯಾಗೆ ಹೋದಾಗಲೆಲ್ಲ ಆತನು ಮದೀನ ದಾಟಿ ಹೋಗುತ್ತಿದ್ದನು. ಅಲ್ಲಿ ಆತನು ಹಝ್ರತ್ ಸಅದ್(ರ) ರವರ ಬಳಿ ತಂಗುತ್ತಿದ್ದನು. ಹೀಗೆ ಹಝ್ರತ್ ಸಅದ್(ರ) ರವರು ಸಹ ಮಕ್ಕಕ್ಕೆ ಹೋದಾಗ ಆತನ ಬಳಿ ತಂಗಿದರು. ತದನಂತರ ಅವರು ಉಮಯ್ಯಾಗೆ ನಾನು ಕಅಬದ ಪ್ರದಕ್ಷಿಣೆ ಮಾಡಬೇಕೆಂದು ಬಯಸುತ್ತೇನೆ ಎಂದು ಹೇಳಿದರು. ಅದಕ್ಕೆ ಉಮಯ್ಯ ಹೇಳಿದನು ಸ್ವಲ್ಪ ತಡೆಯಿರಿ ಮಧ್ಯಾಹ್ನದ ಹೊತ್ತು ಜನರು ತಮ್ಮ ಮನೆಗಳಲ್ಲಿ ವಿಶ್ರಾಂತಿ ಪಡೆಯುತ್ತಿರುವಾಗ ಹೋಗಿರಿ ಎಂದು. ವರದಿಗಾರರು ಹೇಳುತ್ತಾರೆ: ಹಝ್ರತ್ ಸಅದ್(ರ) ಪ್ರದಕ್ಷಿಣೆ ಮಾಡುತ್ತಿರುವಾಗ ಅಬೂಜಹಲ್ ಅಲ್ಲಿದ್ದನು. ಆತನು ನೀವು ಯಾರು? ಎಂದು ಕೇಳಿದನು ಕಅಬವನ್ನು ಪ್ರದಕ್ಷಿಸುತ್ತಿರುವ ವ್ಯಕ್ತಿ ಯಾರು? ಎಂದು ಕೇಳಿದಾಗ ಹಝ್ರತ್ ಸ್ವತಃ ಹೇಳುತ್ತಾರೆ ನಾನು ಸಅದ್ ಆಗಿದ್ದೇನೆ. ಇದಕ್ಕೆ ಅಬೂಜಹಲ್ ಬಹಳ ಸಿಟ್ಟಿನಿಂದ ಸಅದ್ ಅವರನ್ನು ಉದ್ದೇಶಿಸಿ ಹೇಳಿದನು ಏನು ನೀವೆಲ್ಲರು ಈ ಧರ್ಮಭ್ರಷ್ಟನಾದ (ನೌಝುಬಿಲ್ಲಾಹ್) ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಆಶ್ರಯ ನೀಡಿದ ನಂತರ ನೀವೆಲ್ಲರು ಶಾಂತಿಯಿಂದ ಕಅಬದ ಪ್ರದಕ್ಷಿಣೆ ನೀಡುವಿರಿ ಎಂದು ಭಾವಿಸುತ್ತೀರ. ಆಗ ಸಅದ್ ಹೇಳಿದರು ಹೌದು. ಆಗ ಅವರಿಬ್ಬರ ನಡವೆ ವಾದವಿವಾದ ನಡೆಯಿತು. ಉಮಯ್ಯ ಸದ್ ಕುರಿತು ಹೇಳಿದನು ಎಲೈ ಸಅದ್ ನೋಡಿರಿ!! ಅಬುಲ್‌ಹಕಮ್‌ನ ವಿರುದ್ಧ ಹೀಗೆ ತಮ್ಮ ಧ್ವನಿ ಏರಿಸಬೇಡಿರಿ ಅಂದರೆ ಮಕ್ಕದವರು ಅಬೂಜಹಲ್‌ನನ್ನು ಅಬುಲ್‌ಹಕಮ್ ಎಂದು ಕರೆಯುತ್ತಿದ್ದರು, ಮಕ್ಕದ ಇವರು ಸರದಾರರಾಗಿದ್ದಾರೆ. ಆತನ ಮುಂದೆ ಹೀಗೆ ತಮ್ಮ ಧ್ವನಿ ಏರಿಸಬೇಡಿ. ಆಗ ಸಅದ್(ರ) ಹೇಳಿದರು ಅಲ್ಲಾಹನಆಣೆ!! ಒಂದುವೇಳೆ ನೀನು ನಮಗೆ ಕಅಬದಿಂದ ತಡೆದರೆ ನೆನಪಿಡಿರಿ ನಿನಗೂ ಸಹ ಸೀರಿಯಾದ ಮಾರ್ಗದಲ್ಲಿ ಶಾಂತಿ ಸಿಗುವುದಿಲ್ಲ. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳುತ್ತಾರೆ: ಇದನ್ನು ಆಲಿಸಿದ ನಂತರ ಉಮಯ್ಯ ಪದೇ ಪದೇ ಹಝ್ರತ್ ಸಅದ್(ರ)ರವರನ್ನು ಹೀಗೆ ಹೇಳುತ್ತಿದ್ದನು: ತಮ್ಮ ಧ್ವನಿಯನ್ನು ಏರಿಸಬೇಡಿ ಎಂದು ತಡೆಯುತ್ತಾ ಇದ್ದನು. ಹಝ್ರತ್ ಸಅದ್(ರ) ಸಹ ಕೊಪದಲ್ಲಿದ್ದರು ಅವರು ಈ ಮಾತುಗಳನ್ನು ಆಲಿಸಿ ಉಮಯ್ಯಗೆ ಹೇಳಿದರು ಉಮಯ್ಯ!! ನೀವು ಈ ವಿಷಯಕ್ಕೆ ತಲೆಹಾಕ ಬೇಡಿ. ಅಲ್ಲಾಹನಆಣೆ!! ನನಗೆ ಪ್ರವಾದಿ ಸಲ್ಲಲ್ಲಹು ಅಲೈಹಿವಸಲ್ಲಮರ ಹೇಳುತ್ತಿದ್ದರು, ಅಬೂಜಹಲ್ ಉಮಯ್ಯನನ್ನು ಕೊಲ್ಲುವವನಾಗುವನು ಎಂದು ಭವಿಷ್ಯವಾಣಿ ನುಡಿದಿದ್ದಾರೆ ಅಂದರೆ ಅಬೂಜಹಲ್ ನಿನ್ನನ್ನು ಕೊಲ್ಲುವನು. ಉಮಯ್ಯ ಹೇಳುತ್ತನೆ ನನಗೆ? ಹಝ್ರತ್ ಸಅದ್(ರ) ಹೇಳುತ್ತಾರೆ ಹೌದು. ಇದನ್ನು ಆಲಿಸಿದ ನಂತರ ಉಮಯ್ಯ ಹೇಳುತ್ತಾನೆ ಅಲ್ಲಾಹನಆಣೆ!! ಮುಹಮ್ಮದ್(ಸ) ಹೇಳಿದ ಮಾತು ಸುಳ್ಳಾಗುವುದಿಲ್ಲ. ಈ ಮಾತನ್ನು ಆಲಿಸಿ ಉಮಯ್ಯ ಬಿನ್ ಖಲಫ್ ಗಾಬರಿಗೊಂಡನು. ಮನೆಗೆ ತಲುಪಿದ ನಂತರ ಆತನು ತನ್ನ ಪತ್ನಿಯನ್ನು ಸಅದ್(ರ)ರವರ ಈ ಮಾತಿನ ಬಗ್ಗೆ ತಿಳಿಸಿ ಹೇಳಿದಾಗ ಆತನ ಪತ್ನಿ ಹೇಳಿದಳು ಪ್ರವಾದಿ(ಸ)ರವರ ಮಾತುಗಳ ಸತ್ಯ ಮತ್ತು ಅವರು ನುಡಿದಿರುವ ಭವಿಷ್ಯವಾಣಿಗಳು ಪೂರ್ಣಗೊಂಡಿದೆ. ಹಝ್ರುತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳುತ್ತಾರೆ: ಆತನು ಬದರ್ ಕಡೆ ಹೊರಟಾಗ ಆತನ ಪತ್ನಿ ಹೇಳಿದಳು ನಿಮಗೆ ಹಝ್ರತ್ ಸಅದ್‌ನ ಆ ಮಾತುಗಳು ನೆನಪಿಲ್ಲವೇ? ಉಮಯ್ಯ ಹೋರ ಹೋಗಲು ಸಿದ್ಧವಿರಲಿಲ್ಲ ಆದರೆ ಅಬೂಜಹಲ್ ಹೇಳಿದನು ನೀವು ಈ ಪ್ರಂತ್ಯದ ಸರದಾರಗಳಲ್ಲಿ ಓರ್ವ ಸರದಾರನಾಗಿದ್ದೀಯ. ಒಂದು ಎರಡು ದಿವಸವಾದರು ನನ್ನೊಂದಿಗೆ ಬರಬೇಕು ಎಂದನು. ಹೀಗೆ ಆತನು ಅವನೊಂದಿಗೆ ಹೋದಾಗ ಅಲ್ಲಾಹನು ಆತನನ್ನು ಕೊಲ್ಲಿಸಿದನು. (ಸಹೀಹ್ ಬುಖಾರಿ, ಕಿತಾಬುಲ್ ಮನಾಖಿಬ್, ಹದೀಸ್–3632)

ಇನ್ನೊಂದು ವರದಿಯಲ್ಲಿ ಉಮಯ್ಯ ಬಿನ್ ಖಲಫ್‌ನ ಬದರ್ ಯುದ್ಧದಲ್ಲಿ ಭಾಗವಹಿಸುವಿಕೆ ಮತ್ತು ಕೊಲ್ಲಲ್ಪಡುವ ಬಗ್ಗೆ ಹೀಗೆ ವಿವರಿಸಲಾಗಿದೆ. ಹಝ್ರತ್ ಸಅದ್(ರ) ಹೇಳಿದರು ಉಮಯ್ಯ!! ಅಲ್ಲಾಹನ ಆಣೆ ನಾನು ರಸೂಲುಲ್ಲಾಹ್(ಸ) ಹೀಗೆ ಹೇಳುತ್ತಿದ್ದನ್ನು ಆಲಿಸಿದ್ದೆನೆ ಅಂದರೆ ಸಹಾಬರವರು ನಿಮ್ಮನ್ನು ಕೊಲ್ಲುತ್ತಾರೆ ಎಂದು. ಆತನ ಕೇಳಿದನು ಮಕ್ಕದಲ್ಲಿಯೇ? ಹಝ್ರತ್ ಸಅದ್(ರ) ಹೇಳುತ್ತಾರೆ ನನಗೆ ಇದರ ಬಗ್ಗೆ ಅರಿವಿಲ್ಲ. ಉಮಯ್ಯ ಹಝ್ರತ್ ಸಅದ್(ರ) ರವರ ಈ ಮಾತುಗಳನ್ನು ಆಲಸಿ ಗಾಬರಿಗೊಂಡನು. ಉಮಯ್ಯ ತನ್ನ ಮನೆಗೆ ತೆರಳಿದಗ ಆತನು ತನ್ನ ಪತ್ನಿ ಸಫಿಯ್ಯ ಅಥವಾ ಕರೀಮ ಬಿನ್ತ್ ಮುಮಾರ್‌ಳನ್ನು ಹೇಳಿದನು: ಎಲೈ ಉಮ್ಮೆ ಸಫ್ವಾನ್! ನೀನು ಸಅದ್ ಮಾತನ್ನು ಆಲಿಸಿದೆಯೇ. ಆಕೆ ಹೇಳಿದಳು ಏನಾಯಿತು ಸಅದ್ ಏನನ್ನು ಹೇಳುತ್ತಾರೆ? ಅದಕ್ಕೆ ಉಮಯ್ಯ ಹೇಳಿದನು ಆತನು(ಸಅದ್) ಹೇಳುತ್ತಾನೆ ಮುಹಮ್ಮದ್(ಸ)ರವರು ನನ್ನನ್ನು ಕೊಲ್ಲುತ್ತಾರೆ ಎಂದು ಹೇಳುತ್ತಾರೆ. ಅದಕ್ಕೆ ನಾನು ಪ್ರಶ್ನಿಸಿದೆ ಮಕ್ಕದಲ್ಲಿಯೇ? ಎಂದು ಅದಕ್ಕೆ ಅವರು ಉತ್ತರಿಸಿದರು ನನಗೆ ಇದರ ಬಗ್ಗೆ ಅರಿವಿಲ್ಲ. ತದನಂತರ ಉಮಯ್ಯ ಹೇಳಿದನು ಅಲ್ಲಾಹನಆಣೆ ನಾನು ಮಕ್ಕದಿಂದ ಹೊರ ಹೋಗುವುದಿಲ್ಲ. ಇಷ್ಟು ಗಾಬರಿಗೊಂಡಿದ್ದನು. ಬದರ್ ಯುದ್ಧಕ್ಕಾಗಿ ಅಬೂಜಹಲ್ ಜನರನ್ನು ಕರೆದಾಗ ಉಮಯ್ಯನನ್ನು ಸಹ ಆತನು ಕರೆದನು. ಉಮಯ್ಯ ಹೊರಬರು ಇಷ್ಟೊಡುತ್ತಿರಲಿಲ್ಲ. ಅಬೂಜಹಲ್ ಉಮಯ್ಯನ ಬಳಿ ಬಂದು ಹೇಳಿದನು ಅಬೂ ಸುಫೀಯಾನ್!! ನೀನು ಓರ್ವ ಸರದಾರನಾಗಿದ್ದೀಯ ಒಂದು ವೇಳೆ ನೀನು ಹೊರಬರುತ್ತಿಲ್ಲವದರೆ ಜನರು ನಿನ್ನ ಬಗ್ಗೆ ಏನು ಅಭೀಪ್ರಯ ನೀಡುವರು. ಅಬೂಜಹಲ್ ಆತನನ್ನು ಒಪ್ಪಿಸಿದನು. ಕೊನೇಗೆ ಉಮಯ್ಯ ಹೇಳಿದನು: ನೀನು ಒತ್ತಾಯವಾಗಿ ಕರೆದುಕೊಂಡು ಹೋಗಬೇಕಾದರೆ ನಾನು ಮಕ್ಕದ ಒಂದು ಉತ್ತಮ ಒಂಟೆಯನ್ನು ಖರೀಸಿದ ನಂತರ ಬರುವೆನು. ತದನಂತರ ಆತನು ತನ್ನ ಪತ್ನಿ ಉಮ್ಮೆ ಸಫ್ವಾನ್‌ಗೆ ಮಾರ್ಗದಲ್ಲಿ ಅವಶ್ಯಕವಾಗಿರುವ ಸಾಮಗ್ರಿಗಳನ್ನು ಸಿದ್ಧಗೊಳಿಸಲು ಹೇಳಿದನು. ಆಗ ಆತನ ಪತ್ನಿ ಹೇಳಿದಳು ನೀವು ಸಅದ್‌ರವರ ಆ ಮಾತುಗಳನ್ನು ಮರೆತು ಹೋಗಿದ್ದೀರಿ. ಆಗ ಉಮಯ್ಯ ಹೇಳಿದನು ನಾನು ಮರಿಯಲಿಲ್ಲ. ನಾನು ಸ್ವಲ್ಪ ದೂರ ಅವರೊಂದಿಗೆ ಹೋಗುವೆನು ಅನಂತರ ಹಿಂದಿರುಗಿಬರುವೆನು. ಕೊನೇಗೆ ಅಲ್ಲಾಹನು ಬದರ್ ಯುದ್ಧಭೂಮಿಯಲ್ಲಿ ಆತನ್ನನು ಕೊಲ್ಲಿಸಿದನು. (ಸಹೀಹ್ ಬುಖಾರಿ, ಕಿತಾಬುಲ್ ಮಗಾಝಿ. ಹದೀಸ್–3950)

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಸಅದ್ ಬಿನ್ ಮುಆಝ್(ರ)ರವರ ಬಗ್ಗೆ ಹೀಗೆ ವಿವರಿಸಿದ್ದಾರೆ: "ಮದೀನದ ಒಬ್ಬ ಮುಖಂಡ ಸಅದ್ ಬಿನ್ ಮುಆದ್ ಔಸ್ ಗೋತ್ರದ ನೇತಾರರೂ ಆಗಿದ್ದರು. ಅವರು ಬೈತುಲ್ಲಾ ಆದ ಕಅಬದ ಪ್ರದಕ್ಷಿಣೆ ಮಾಡಲು ಮಕ್ಕಕ್ಕೆ ಹೋಗಿದ್ದರು. ಅಬೂಜಹಲ್ ಅವರನ್ನು ನೋಡಿ ಸಿಟ್ಟಿನಿಂದ ಹೇಳಿದನು: ಧರ್ಮತ್ಯಾಗಿಯಾದ ಮುಹಮ್ಮದನಿಗೆ ಆಶ್ರಯ ನೀಡಿದ ನಂತರವೂ ನಿರ್ಭಯರಾಗಿ ಕಅಬವನ್ನು ಪ್ರದಕ್ಷಿಣೆ ಮಾಡಬಹುದೆಂದು ನೀವು ಯೋಚಿಸುತ್ತಿರುವಿರೇನು? ನೀವು ಅವನಿಗೆ ಸಂರಕ್ಷಣೆ ಮತ್ತು ಸಹಾಯ ನೀಡುವ ಶಕ್ತಿಯನ್ನು ಹೊಂದಿರುವಿರೆಂದು ಭಾವಿಸುತ್ತಿರುವಿರೇನು? ದೇವನಾಣೆ ಈಗ ನಿನ್ನೊಂದಿಗೆ ಅಬೂ ಸುಫ್‌ಯಾನ್ ಇಲ್ಲದೆ ಇರುತ್ತಿದ್ದರೆ ನೀನು ನಿನ್ನ ಮನೆಯವರ ಬಳಿಗೆ ಮರಳಿ ಹೋಗಲು ಸಾಧ್ಯವಿರಲಿಲ್ಲ. ಸಅದ್ ಬಿನ್ ಮುಆದ್ ಹೇಳಿದರು: ಅಲ್ಲಾಹನಾಣೆ ನೀವು ನಮ್ಮನ್ನು ಕಅಬ ಸಂದರ್ಶಿಸುವುದರಿಂದ ತಡೆದರೆ ನೀವು ನೆನಪಿಡಿರಿ ನೀವು ಸಿರಿಯಾ ದೇಶಕ್ಕೆ ಹೋಗುವ ಮಾರ್ಗ ನಿಮಗೆ ಸುರಕ್ಷಿತವಾಗಿರಲಾರದು." (ದೀಬಾಚ ತಫ್‌ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–235–236)

ಹಝ್ರತ್ ಸಅದ್ ಬಿನ್ ಮುಆದ್ ಮತ್ತು ಹಝ್ರತ್ ಉಸೈದ್ ಬಿನ್ ಹಝೀರ್ ಇವರಿಬ್ಬರೂ ಪ್ರಮುಖ ಸಹಾಬರಾಗಿ ಗಣಿಸಲ್ಪಡುತ್ತಾರೆ. ಅನ್ಸಾರ್‌ಗಳಲ್ಲಿ ನಿಸ್ಸಂಶಯವಾಗಿ ಅವರಿಗೆ ಬಹಳ ಉನ್ನತ ಸ್ಥಾನವಿತ್ತು. ಸಅದ್ ಅತ್ಯಂತ ಪ್ರಾಮಾಣಿಕರೂ ನಿಷ್ಠಾವಂತರೂ ಇಸ್ಲಾಮ್‌ಗೋಸ್ಕರ ಮತ್ತು ಇಸ್ಲಾಮಿನ ಸ್ಥಾಪಕರಿಗೋಸ್ಕರ ಜೀವಾರ್ಪಣೆ ಮಾಡುವ ಪ್ರೇಮಿ ಯುವಕ ಆಗಿದ್ದರು. ಸಅದ್ ಯೌವ್ವನದಲ್ಲಿಯೇ ಮೃತರಾದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೀಗೆ ಹೇಳಿದ್ದರು: ಸಅದ್ ಮೃತನಾದಾಗ ರಹ್ಮಾನನ

ಅರ್‌ಶ್ ಸಹ ಅಲುಗಾಡಿತು. ಇದೊಂದು ಗಾಢವಾದ ಸತ್ಯವನ್ನೊಳಗೊಂಡ ಹೇಳಿಕೆಯಾಗಿತ್ತು.

ಹಝ್ರತ್ ಸಅದ್ ಬಿನ್ ಮುಆದ್ ಬದರ್, ಉಹುದ್, ಖಂದಕ್ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಭಾಗವಹಿಸಿದ್ದರು. ಬದರ್ ಯುದ್ಧದ ದಿನ ಔಸ್ ಗೋತ್ರದ ಪತಾಕೆ ಅವರ ಕೈಯಲ್ಲಿ ಇತ್ತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-321-322, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್)

ಬದರ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಸಅದ್ ಬಿನ್ ಮುಆದ್ ಪ್ರದರ್ಶಿಸಿದ ಭಾವನೆ ಮತ್ತು ಉತ್ಸಾಹ ಮತ್ತು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಅವರಿಗಿದ್ದ ಪ್ರೀತಿ ಮತ್ತು ಜೀವಾರ್ಪಣೆಯ ಭಾವನೆಯ ಪ್ರಕಟಣೆ ಅವರು ಬದರ್ ಯುದ್ಧದ ಆರಂಭದ ಮೊದಲು ನೀಡಿದ ಸಲಹೆಯಿಂದ ಸ್ಪಷ್ಟವಾಗುತ್ತದೆ. ಅದರ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್(ರ) ತಮ್ಮ ಗ್ರಂಥದಲ್ಲಿ ಅದರ ಬಗ್ಗೆ ಹೀಗೆ ವಿವರಿಸಿದ್ದಾರೆ:

ಮುಸ್ಲಿಮರು ಸಫ್‌ರ ಎಂಬ ಸ್ಥಳದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಲ್ಲಾ ಸಹಾಬರನ್ನು ಜಮಾಯಿಸಿ ಮಕ್ಕದ ಅವಿಶ್ವಾಸಿಗಳ ಸೈನ್ಯದ ಬಗ್ಗೆ ಸಮಾಚಾರ ನೀಡಿ ಅವರ ಸಲಹೆ ಕೇಳಿದರು – ಈಗ ನಾವು ಏನು ಮಾಡಬೇಕು ಎಂದು. ಕೆಲವು ಸಹಾಬರು ಹೀಗೆ ನಿವೇದಿಸಿದರು: ನಾವು ಅವಿಶ್ವಾಸಿಗಳ ವ್ಯಾಪಾರಿ ಸಂಘವನ್ನು ಎದುರಿಸುವುದು ಉತ್ತಮವೆಂದು ತೋರುತ್ತದೆ. ಏಕೆಂದರೆ ಸೈನ್ಯದ ಎದುರಿಗೆ ಹೋರಾಡಲು ಈಗ ನಾವು ಪೂರ್ಣವಾಗಿ ಸಿದ್ಧತೆ ನಡೆಸಿಲ್ಲ. ಆದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ಸಲಹೆಯನ್ನು ಇಷ್ಟಪಡಲಿಲ್ಲ. ಇನ್ನೊಂದು ಕಡೆ ಹಿರಿಯ ಸಹಾಬರು ಆ ಸಲಹೆ ಕೇಳಿದ ಕೂಡಲೆ ಎದ್ದು ನಿಂತು ಜೀವಾರ್ಪಣೆ ಮಾಡಲು ತಾವು ಸಿದ್ಧರಾಗಿರುವೆವು ಎಂದು ಭಾಷಣ ಮಾಡಿದರು. ಅವರು ಹೇಳಿದರು: ನಮ್ಮ ಜೀವ ಮತ್ತು ಸಂಪತ್ತು ಎಲ್ಲವೂ ಅಲ್ಲಾಹನದಾಗಿವೆ. ನಾವು ಪ್ರತಿಯೊಂದು ಕ್ಷೇತ್ರದಲ್ಲಿ ಪ್ರತಿಯೊಂದು ರೀತಿಯ ಸೇವೆಗೆ ಸಿದ್ಧರಾಗಿರುವೆವು. ಮಿಖ್‌ದಾದ್ ಬಿನ್ ಅಮರ್ ಹೇಳಿದರು: ಓ ಸಂದೇಶವಾಹಕರೇ, ನಾವು ಪ್ರವಾದಿ ಮೂಸಾರ ಅನುಯಾಯಿಗಳ ಹಾಗೆ ಅಲ್ಲ. ನಿಮ್ಮೊಂದಿಗೆ ನೀವು ಮತ್ತು ನಿಮ್ಮ ದೇವ ಯುದ್ಧ ಮಾಡಿರಿ ನಾವು ಇಲ್ಲೇ ಕುಳಿತಿರುವೆವು ಎಂದು ನಾವು ಅವರ ಹಾಗೆ ಹೇಳಲಾರೆವು. ನಾವು ಹೇಳುತ್ತೇವೆ ನೀವು ನಮ್ಮನ್ನು ಎಲ್ಲಿಗೆ ಕರೆದುಕೊಂಡು ಹೋಗುವಿರಾದರೂ ನಾವು ನಿಮ್ಮ ಜೊತೆಗಿರುವೆವು. ನಾವು ನಿಮ್ಮ ಎಡ ಬಲ ಭಾಗಗಳಲ್ಲಿಯೂ ಹಿಂದೆಯೂ ಮುಂದೆಯೂ ನಿಂತು ಹೋರಾಡುವೆವು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ಭಾಷಣವನ್ನು ಆಲಿಸಿದಾಗ ಅವರ ಮುಖಾರವಿಂದ ಸಂತೋಷಭರಿತವಾಯಿತು. ಆ ಸಂದರ್ಭದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅನ್‌ಸಾರ್‌ಗಳ ಉತ್ತರ ಏನೆಂದು ತಿಳಿಯಲು ಬಯಸಿದ್ದರು. ಅನ್‌ಸಾರ್‌ಗಳಲ್ಲಿ ಯಾರಾದರೊಬ್ಬ ಪ್ರಮುಖ ಅಂತಹ ಮಾತುಗಳನ್ನಾಡಲಿ ಎಂದು ಪ್ರತೀಕ್ಷಿಸುತ್ತಿದ್ದರು. ಅವರು ಮತ್ತೂ ಹೀಗೆ ಹೇಳುತ್ತಾ ಇದ್ದರು: ನೀವು ಸಲಹೆ ನೀಡಿರಿ ನಾವೇನು ಮಾಡಬೇಕೆಂದು. ಆಗ ಔಸ್ ಗೋತ್ರದ ಮುಖಂಡರಾದ ಸಅದ್ ಬಿನ್ ಮುಆದ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾತಿನ ಉದ್ದೇಶವೇನೆಂದು ಅರಿತುಕೊಂಡು ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ತಾವು ಪ್ರಾಯಶಃ ಅನ್‌ಸಾರ್‌ಗಳ ಸಲಹೆ ಏನೆಂದು ತಿಳಿಯಲು ಬಯಸುತ್ತಿರುವಿರಿ. ಅಲ್ಲಾಹನಾಣೆ, ನಾವು ನಿಮ್ಮನ್ನು ಸತ್ಯಸಂಧರೆಂದು ನಂಬಿ ನಮ್ಮ ಕೈಯನ್ನು ನಿಮ್ಮ ಕೈಯಲ್ಲಿರಿಸಿರುತ್ತೇವೆ. ನೀವು ಎಲ್ಲಿಗೆ ಹೋಗುವುದಾದರೂ ನಾವು ನಿಮ್ಮ ಜೊತೆಗಿರುವೆವು. ನಿಮ್ಮನ್ನು ಸತ್ಯದೊಂದಿಗೆ ನಿಯೋಜಿಸಿದವನ ಹೆಸರಲ್ಲಿ ಆಣೆಹಾಕಿ ಹೇಳುತ್ತೇವೆ, ತಾವು ನಮ್ಮೊಂದಿಗೆ ಸಮುದ್ರದೊಳಗೆ ನೆಗೆಯಲು ಆಜ್ಞಾಪಿಸಿದರೆ ನಾವು ನೆಗೆಯುವೆವು. ನಮ್ಮ ಪೈಕಿ ಒಬ್ಬ ವ್ಯಕ್ತಿ ಸಹ ಹಿಂಜರಿಯಲಾರನು. ಇನ್‌ಶಾಅಲ್ಲಾಹ್ ತಾವು ನಮ್ಮನ್ನೆಲ್ಲಾ ಯುದ್ಧದಲ್ಲಿ ಸಹನೆಯಿಂದ ಹೋರಾಡುವವರಾಗಿ ಕಾಣುವಿರಿ. ನಿಮ್ಮ ಕಣ್ಣಿಗೆ ತಂಪನ್ನು ನೀಡುವಂತಹ ಕೆಲಸವನ್ನು ಮಾಡುವವರಾಗಿ ನಮ್ಮನ್ನು ಕಾಣುವಿರಿ.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಈ ಭಾಷಣವನ್ನು ಆಲಿಸಿದಾಗ ಬಹಳ ಸಂತೋಷಗೊಂಡರು ಮತ್ತು ಹೇಳಿದರು: ಅಲ್ಲಾಹನ ನಾಮೋಚ್ಚಾರಣೆ ಮಾಡುತ್ತಾ ಮುಂದೆ ಸಾಗಿರಿ. ನೀವು ಸಂತೋಷಪಡಿರಿ. ಏಕೆಂದರೆ ಅಲ್ಲಾಹನು ನನ್ನೊಂದಿಗೆ ಹೀಗೆ ವಾಗ್ದಾನ ಮಾಡಿದ್ದಾನೆ: ಅವಿಶ್ವಾಸಿಗಳ ಎರಡು ಗುಂಪುಗಳಾದ ವ್ಯಾಪಾರಿ ಸಂಘ ಮತ್ತು ಸೈನ್ಯ ಇವುಗಳ ಪೈಕಿ ಒಂದರ ಮೇಲೆ ನಿಶ್ಚಯವಾಗಿಯೂ ಅವನು ನಮಗೆ ಜಯ ನೀಡುವನು. ಅಲ್ಲಾಹನಾಣೆ ನಾನು ಆ ಸ್ಥಳವನ್ನು ಕಾಣುತ್ತಾ ಇದ್ದೇನೆ. ಅಲ್ಲಿ ಶತ್ರುಗಳಾದ ಜನರು ಹತರಾಗಿ ಬೀಳುವರು. (ಸೀರತ್ ಖಾತಮುನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್, ಪುಟ-354-355, ಫರ್‌ಹಂಗ್ ಸೀರತ್, ಪುಟ-173, ಝುವಾರಿ ಅಕಡೆಮಿ ಕರಾಚಿ 2003)

ಅನಂತರ ಹಾಗೆಯೇ ಸಂಭವಿಸಿತು.

ಸಅದ್ ಬಿನ್ ಮುಆದ್‌ರ ಬಗ್ಗೆ ಇನ್ನಷ್ಟು ವಿವರಗಳನ್ನು ಇನ್‌ಶಾಅಲ್ಲಾಹ್ ಮುಂದಿನ ಖುತ್‌ಬದಲ್ಲಿ ಪ್ರಸ್ತಾಪಿಸುವೆನು.

***************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಹೂದ್ ಅಧ್ಯಾಯವು ನನ್ನನ್ನು ವೃದ್ಧನನ್ನಾಗಿ ಮಾಡಿದೆ. ಏಕೆಂದರೆ ಈ ಆದೇಶದ ಪರಿಣಾಮವಾಗಿ ನನ್ನ ಮೇಲೆ ಬಹು ದೊಡ್ಡ ಜವಾಬ್ದಾರಿ ಬಿದ್ದಿದೆ. ತನ್ನನ್ನು ತಾನು ದೃಢಗೊಳಿಸಬೇಕು ಮತ್ತು ಅಲ್ಲಾಹನು ಎಲ್ಲ ನಿರ್ದೇಶಗಳನ್ನು ಪಾಲಿಸಬೇಕು, ತನ್ನ ವೈಯುಕ್ತಿಕ ಮಟ್ಟ ಹೇಗೋ ಸುಧಾರಿಸಿ ಕೊಳ್ಳಬಹುದು ಆದರೆ ಇತರರನ್ನು ಸುಧಾರಿಸುವುದು ಸುಲಭದ ಕೆಲಸವಲ್ಲ. ಅದರಿಂದ ನಮ್ಮ ನಬಿ ಕರೀಮ್(ಸ) ರವರ ಮಹೋನ್ನತವಾದ ವ್ಯಕ್ತಿತ್ವ ಮತ್ತು ಅನುಗ್ರಹ ಶಕ್ತಿಯ ಆಳ ತಿಳಿದು ಬರುತ್ತದೆ. ಆದರೂ ನೋಡಿ ಎಷ್ಟು ಉತ್ತಮ ರೀತಿಯಲ್ಲಿ ಅದನ್ನು ಪಾಲಿಸಿದರು. ಸಹಾಬರ ಒಂದು ಪವಿತ್ರ ಸಂಘಟನೆ ಕಟ್ಟಿದರು. ಅವರನ್ನು **"ಕುನ್‌ತುಮ್ ಖೈರ ಉಮ್ಮತಿನ್ ಉಖ್‌ರಿಜತ್ ಲಿನ್ನಾಸ್** (ಆಲಿ ಇಮ್ರಾನ್: 111) ಎಂದು ಕರೆಯಲ್ಪಟ್ಟರು ಮತ್ತು **ರಝಿಯಲ್ಲಾಹ್ ಅನ್‌ಹುಮ್ ವ ರಝೀ ಅನ್‌ಹು** (ಅಲ್ ಬಯ್ಯನ: 9) ಎಂಬ ದೈವಿಕ ವಾಣಿ ಕೇಳಿಬಂದಿತು. ಅವರ ಜೀವನದಲ್ಲಿ ಯಾವೊಬ್ಬ ಕಪಟ ವಿಶ್ವಾಸಿಯು ಮದೀನದಲ್ಲಿ ಉಳಿಯಲಿಲ್ಲ. ಅಂತೂ ಅವರಿಗೆ ದೊರೆತಂತಹ ವಿಜಯಗಳು ಯಾವ ಪ್ರವಾದಿಯ ಜೀವನ ದೃಷ್ಟಾಂತಗಳಲ್ಲಿ ಕಂಡು ಬರುವುದಿಲ್ಲ. ಅದರಿಂದ ಅಲ್ಲಾಹನ ಆಶಯವೇನಾಗಿತ್ತೆಂದರೆ, ಮಾತಿಗಷ್ಟೆ ಸೀಮಿತಗೊಂಡು ತೋರಿಕೆ ವಹಿಸಿದ್ದರೆ ನಮ್ಮಲ್ಲಿ ಮತ್ತು ಇತರ ಜನರಲ್ಲಿ ವ್ಯತ್ಯಾಸವೇನಾಯಿತು ಮತ್ತು ಇವರ ಮೇಲೆ ನಿಮಗೆ ಯಾವ ಶ್ರೇಷ್ಠತೆಯಿದೆ. ನೀವು ನಿಮ್ಮ ಕಾರ್ಯಶೈಲಿಯನ್ನು ತೋರಿಸಿ ಅದರಲ್ಲಿ ಒಂದು ಪ್ರಕಾಶವಿರುತ್ತದೆ. ಅದು ಇತರರನ್ನು ಆಕರ್ಷಿಸುತ್ತದೆ. ಏಕೆಂದರೆ ಆಕರ್ಷಣೆ ಇಲ್ಲದಿದ್ದರೆ ಯಾರು ಆ ಕಡೆ ಸೆಳೆಯುವುದಿಲ್ಲ. ಯಾವನಾದರೂ ಕೊಳಕು ವಸ್ತುವನ್ನು ಮೆಚ್ಚಬಹುದೇ? ಬಟ್ಟೆಯಲ್ಲಿ ಒಂದೇ ಒಂದು ಕಲೆ ಇದ್ದರೆ ಅದು ಸರಿ ಕಾಣುವುದಿಲ್ಲ. ಅದೇ ರೀತಿ ಎಲ್ಲಿಯವರೆಗೆ ನಿಮ್ಮಲ್ಲಿ ಅಂತಕರಣ ಶುದ್ಧಿ ಇರುವುದಿಲ್ಲವೋ ಆಗ ಯಾರು ನಿಮ್ಮ ಬಳಿ ಸುಳಿಯುವುದಿಲ್ಲ. ಪ್ರತಿಯೊಬ್ಬನು ಉತ್ತಮ ವಸ್ತುವನ್ನೆ ಬಯಸುತ್ತೇನೆ. ಅದೇ ರೀತಿ ನೀವು ಉತ್ತಮ ಗುಣಗಳನ್ನು ಹೊಂದದೆ ಇದ್ದರೆ ಯಾವ ಸ್ಥಾನಕ್ಕೂ ತಲುಪಲು ಸಾಧ್ಯವಿಲ್ಲ.

**(ಮಲ್‌ಫೂಝಾತ್ ಸಂ:01, ಪುಟ:165 ರಿಂದ 167, ಮುದ್ರಣ 2018 ಖಾದಿಯಾನ್)**

### ಮಹೋನ್ನತನಾದ ದೇವ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಅತ್ಯುನ್ನತ ಸಂತೋಷಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ನೋಡಿರುವೆವು ಮತ್ತು ಪ್ರತಿಯೊಂದು ಸೌಂದರ್ಯವನ್ನು ನಾವು ಅವನಲ್ಲಿ ಕಂಡಿರುವೆವು. ಜೀವವನ್ನು ಬಲಿಯರ್ಪಿಸುವುದರಿಂದ (ದೇವನೆಂಬ) ಈ ಸಂಪತ್ತು ಸಿಗಬಹುದಾದರೆ ಹಾಗೆ ಪಡೆಯಲು ಅದು (ಆ ಸಂಪತ್ತು) ಅರ್ಹವಾಗಿದೆ. ಒಬ್ಬನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಪಡೆಯಬಹುದಾಗಿದ್ದರೆ ಹಾಗೆ ಖರೀದಿಸಲು ಯೋಗ್ಯವಾದ ಮಾಣಿಕ್ಯ ಇದಾಗಿದೆ. ಎಲೈ ಭಾಗ್ಯಹೀನರೇ, ನೀವು ಈ ಕಾರಂಜಿಯ ಕಡೆಗೆ ಓಡಿ ಬನ್ನಿರಿ. ಇದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ನಿಮ್ಮನ್ನು ರಕ್ಷಿಸುವಂತಹ ಜೀವಜಲವನ್ನೀಯುವ ಕಾರಂಜಿಯಾಗಿದೆ. ನಾನೇನು ಮಾಡಲಿ? ಈ ಶುಭವಾರ್ತೆಯನ್ನು ಜನಹೃದಯಗಳಲ್ಲಿ ಹೇಗೆ ನೆಲೆವೂರುವಂತೆ ಮಾಡಲಿ? ಇವನೇ ನಿಮ್ಮ ದೇವನು ಎಂದು ಜನರು ಆಲಿಸುವಂತೆ ಮಾಡಲು ಯಾವ ಡೋಲು ಬಾರಿಸಿ ಪೇಟೆಗಳಲ್ಲಿ ಡಂಗುರ ಸಾರಲಿ? ಜನರು ಕಿವಿಗೊಟ್ಟು ಕೇಳುವಂತೆ ಮಾಡಲು ನಾನು ಯಾವ ಮದ್ದಿನಿಂದ ಚಿಕಿತ್ಸೆ ನಡೆಸಲಿ? ನೀವು ದೇವನಿಗೆ ಸೇರಿದವರಾಗುವಿರಾದರೆ, ದೇವನು ನಿಮ್ಮವನೇ ಆಗುವನು ಎಂದು ದೃಢವಾಗಿ ಅರಿತುಕೊಳ್ಳಿರಿ."

*(ಕಿಶ್ತೀ ನೂಹ್; ರೂಹಾನೀ ಖಝಾಇನ್ ಸಂಪುಟ 19, ಪುಟ 21 – 22)*

**ಇನ್ಸಾನಿಯತ್ ಝಿಂದಾಬಾದ್**

**ಮಾನವೀಯತೆ ಚಿರಕಾಲ ಬಾಳಲಿ**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಈ ಸಮಾರಂಭದ ನಂತರ ಹುಝೂರ್(ಅಬಿಅ) ಮಸೀದಿಯ ಸಭಾಂಗಣಕ್ಕೆ ಆಗಮಿಸಿದರು ಮತ್ತು 9:45 ಗಂಟೆಗೆ ಮಗ್‌ರಿಬ್ ನಮಾಝುನ್ನು ನಿರ್ವಹಿಸಿಕೊಟ್ಟರು. ನಮಾಝಿನ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು.

**25 ಮೇ ಸೋಮವಾರ 2015**

ಹುಝೂರ್(ಅಬಿಅ) ಮುಂಜಾನೆ 4:30 ಗಂಟೆಗೆ ಆಗಮಿಸಿ ಫಝ್ರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರ್(ಅಬಿಅ) ಕಛೇರಿಯ ಅಂಚೆಗಳು, ಪತ್ರಗಳು ಮತ್ತು ಲೋಕದ ವಿವಿಧ **ದೇಶಗಳಿಂದ ಬಂದ ಫ್ಯಾಕ್ಸ್‌ಗಳನ್ನು ಹಾಗೂ ವರದಿಗಳನ್ನು** ಪರಿಶೀಲಿಸಿದರು ಮತ್ತು ನಿರ್ದೇಶನಗಳನ್ನು ನೀಡಿದರು.

**ಕುಟುಂಬ ಭೇಟಿಗಳು**

ಕಾರ್ಯಕ್ರಮದನ್ವಯ ಪೂರ್ವಾಹ್ನ 11:30 ಗಂಟೆಗೆ ಹುಝೂರ್(ಅಬಿಅ) ತಮ್ಮ ಕಛೇರಿಗೆ ಆಗಮಿಸಿದರು ಮತ್ತು ಕುಟುಂಬಗಳ ಹಾಗೂ ವೈಯಕ್ತಿಕ ಬಾಂಧವರ ಭೇಟಿಯ ಕಾರ್ಯಕ್ರಮವನ್ನು ಪ್ರಾರಂಭಿಸಿದರು.

ಇಂದು ಕಾರ್ಯಕ್ರಮದನ್ವಯ 39 ಕುಟುಂಬಗಳ 143 ಜನರು ಮತ್ತು ವೈಯಕ್ತಿಕವಾಗಿ 6 ಜನರು ಒಟ್ಟು 149 ಜನರು ತಮ್ಮ ಪ್ರೀತಿಯ ಇಮಾಮರೊಂದಿಗೆ ಭೇಟಿಯ ಭಾಗ್ಯ ಪಡೆದರು. ಈ ಎಲ್ಲಾ ಕುಟುಂಬಗಳು ಮತ್ತು ಇತರ ಸದಸ್ಯರು ತಮ್ಮ ನೇತಾರರ ಜೊತೆಯಲ್ಲಿ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಹುಝೂರ್(ಅಬಿಅ) ಪ್ರೀತಿಪೂರ್ವಕವಾಗಿ ಭೇಟಿಗಳ ನಡುವೆ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಲೇಖನಿ (ಪೆನ್) ನೀಡಿದರು. ಅಂತೆಯೇ ಸಣ್ಣ ವಯಸ್ಸಿನ ಮಕ್ಕಳಿಗೆ ಚಾಕ್‌ಲೇಟ್ ನೀಡಿದರು.

ಭೇಟಿ ಮಾಡಲು ಬಂದ ಈ ಕುಟುಂಬಗಳು ಜರ್ಮನಿಯ ಜಮಾಅತ್‌ಗಳಾದ Soest, Calw, Burstadt, Radolfzell, Northeim, Neiderhausen, Nidda, Dusseldorf, Koblenz, Hanau, Altmann, Renningen, Osnabruck, Freinsheim, Hofheim, Wurzburg, usingen, Dortmund, Goddelau, Aalen, Erfelden, Meinhiem, Paderbourn ನಿಂದ ಆಗಮಿಸಿದ್ದರು.

ಕೆಲವು ಜಮಾಅತ್‌ಗಳಿಂದ ಈ ಕುಟುಂಬಗಳು ಬಹು ದೂರದ ಪ್ರಯಾಣ ಬೆಳೆಸಿ ತಮ್ಮ ಪ್ರೀತಿಯ ನೇತಾರರನ್ನು ಭೇಟಿ ಮಾಡಲು ಬಂದು ತಲುಪಿದ್ದರು. ಕಾಸಿಲ್‌ನಿಂದ ಬರುವವರು 180 ಕಿ.ಮೀ ಮತ್ತು Dusseldorf ನಿಂದ ಬರುವವರು 230 ಕಿ.ಮೀಗಳ ದೂರದ ಪ್ರಯಾಣ ಬೆಳೆಸಿ ಬಂದು ತಲುಪಿದ್ದರು.

ಭೇಟಿಗಳ ಈ ಕಾರ್ಯಕ್ರಮವು ಮಧ್ಯಾಹ್ನ 2.30 ಗಂಟೆಗೆ ಕೊನೆಗೊಂಡಿತು ಅನಂತರ ಹುಝೂರ್(ಅಬಿಅ) ಝೊಹರ್ ಮತ್ತು ಅಸರ್ ನಮಾಝುಗಳನ್ನು ನಿರ್ವಹಿಸಲು ಮಸೀದಿಯ ಸಭಾಂಗಣಕ್ಕೆ ಆಗಮಿಸಿದರು.

**ಉಪಸ್ಥಿತರ ಮತ್ತು ಅನುಪಸ್ಥಿತರ ಜನಾಝಾ ನಮಾಝ್**

ನಮಾಝ್ ನಿರ್ವಹಣೆಯ ಮುಂಚಿತವಾಗಿ ಕೆಳಗೆ ನಮೂದಿತ ಇಬ್ಬರ ಉಪಸ್ಥಿತ ಜನಾಝಾ ನಮಾಝುಗಳನ್ನು ಮತ್ತು ಆರು ಬಾಂಧವರ ಅನುಪಸ್ಥಿತ ನಮಾಝ್ ಜನಾಝಾ ನಿರ್ವಹಿಸಿದರು.

**ಉಪಸ್ಥಿತ ಜನಾಝಾ ನಮಾಝ್**

1 ಮುಕರ್‌ರಮ್ ಖಾಜಿ ತಾಹಿರ್ ಅಹ್ಮದ್ ಸಾಹೇಬ್ (ಮಾರ್ಬುರ್ಗ್, ಜರ್ಮನಿ) ದಿವಂಗತರು 20 ಮೇ 2015 ರಂದು 63ನೇ ವಯಸ್ಸಿನಲ್ಲಿ ನಿಧನಗೊಂಡಿದ್ದರು. ಇನ್ನಾಲಿಲ್ಲಾಹಿ ವಇನ್ನ ಇಲೈಹಿ ರಾಜಿಯೂನ್. ದಿವಂಗತರಿಗೆ ಜರ್ಮನಿಯಲ್ಲಿ 13 ವರ್ಷಗಳ ಕಾಲ ನ್ಯಾಷನಲ್ ಸೆಕ್ರೆಟರಿ ರಿಸ್ತಾನಾತ ನೆಲೆಯಲ್ಲಿ ಸೇವೆ ಸಲ್ಲಿಸುವ ಭಾಗ್ಯ ದೊರೆಕಿತ್ತು. ಅವರು ಸುಪ್ರಸಿದ್ಧ ಖಾಜಿ ಮುಹಮ್ಮದ್ ನಜೀರ್ ಸಾಹೇಬ್ ಲಾಯಲ್‌ಪುರಿ ದಿವಂಗತರ ಸಹೋದರಿ ಸಂಬಂಧಿಯಾಗಿದ್ದರು. ದಿವಂಗತರು ಮೂಸಿಯಾಗಿದ್ದರು.

2. ಮುಕರ್‌ರಮ್ ಅಝೀಜ್ ಬೇಗಂ ಸಾಹೇಬ್ (ಮುಕರ್‌ರಮ್ ಚೌದರಿ ಅಬ್ದುಲ್ ಹಖ್ ಸಾಹೇಬರ ಪತ್ನಿ, ಡ್ರಾಮ್ ಶಡ್ ಜರ್ಮನಿ) ದಿವಂಗತ 23 ಮೇ 2010 ರಂದು 77ನೇ ವಯಸ್ಸಿನಲ್ಲಿ ನಿಧನಗೊಂಡಿದ್ದರು ಇನ್ನಾ ಲಿಲ್ಲಾಹಿ ವ ಇನ್ನಾ ಆಲೈಹಿ ರಾಜಿಯೂನ್. ದಿವಂಗತ ಮುಕರ್‌ರಮ್ ಶಹಬಾದು ಅಹ್ಮದ್ ಸಾಹೇಬ್, ಸೆಕ್ರೆಟರಿ, ಸನಾತ್ ಒ ತಿಜಾರತ್ ಲೋಕಲ್ ಅಮುರ್ ಡ್ರಾಮ ಶಡ್‌ರವರ ತಾಯಿಯಾಗಿದ್ದರು.

**ಅನುಪಸ್ಥಿತಿ ಜನಾಝಾ ನಮಾಝ್**

1) ಮುಕರ್‌ರಮ್ ರಿಜ್ವಾನ ಪರ್ವೀನ್ ಸಾಹೇಬ (ಮುಕರ್‌ರಮ್ ನಯೀಮ್ ಅಹ್ಮದ್ ಸಂಯಾ ಸಾಹೇಬರ ಪತ್ನಿ ಪ್ರೇಮ್ ಕೋರ್ಟ್ ಜಿಲ್ಲಾ ಆಫೀಜಾ ಬಾದ್) ದಿವಂಗತೆ 9 ಮಾರ್ಚ್ 2015 ರಂದು 42ನೇ ವಯಸ್ಸಿನಲ್ಲಿ ನಿಧನಗೊಂಡಿದ್ದರು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಯೂನ್. ದಿವಂಗತೆಗೆ ದೀರ್ಘಾವಧಿಯವರೆಗೆ ಸದರ್ ಲಜ್‌ನ ಪ್ರೇಮ್ ಕೋರ್ಟ್ ನೆಲೆಯಲ್ಲಿ ಸೇವೆ ಸಲ್ಲಿಸುವ ಭಾಗ್ಯ ದೊರಕಿತ್ತು. ದಿವಂಗತೆ ಮೂಸಿಯಾಗಿದ್ದರು.

2 ಮುಕರ್‌ರಮ್ ಪತಹ ಖಾತೂನ್ ಸಾಹೇಬ (ಮುಕರ್‌ರಮ್ ಖುದಾಯಾರ್ ಸಾಹೇಬ ದಿವಂಗತರ ಪತ್ನಿ ಚಕ್ 35 ಶುಮಾಲಿ ಸರ್ಗೋಧ) ಅವರು ತಾ 23, ಫೆಬ್ರವರಿ 2015 ರಂದು ನಿಧನಗೊಂಡಿದ್ದರು. ಇನ್ನ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್, ದಿವಂಗತೆಯರು ಮೂಸಿಯಾಗಿದ್ದರು. ಅವರು ಮೃದು ಸ್ವಭಾವಿ, ದಯಾಳು ಹಾಗೂ ಸಾತ್ವಿಕ ಸ್ವಭಾವದ ಮಹಿಳೆಯಾಗಿದ್ದರು.

3. ಮುಕರ್‌ರಮ್ ಜಮಾಲುದ್ದೀನ್ ಸಾಹಿಬ್ (ಮುಕರ್‌ರಮ್ ಖುದಾ ಬಕ್ಷ್ ಸಾಹಿಬ್ ದಿವಂಗತರ ಪುತ್ರರು, ಕಲಾಸ್‌ವಾಲಾ, ತಹಸೀಲ್ ಪಸ್ರೂರ್, ಜಿಲ್ಲಾ ಸಿಯಾಲ್ಕೋಟ್) ದಿವಂಗತರು 28 ಏಪ್ರಿಲ್ 2015 ರಂದು ತಮ್ಮ 88ನೇ ವಯಸ್ಸಿನಲ್ಲಿ ನಿಧನರಾದರು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್. ದಿವಂಗತರು ಸಂಘಟನೆಯ ನಿಷ್ಠಾವಂತ ಹಾಗೂ ಕಾಳಜಿಯುಳ್ಳ, ಸಜ್ಜನ ಹಾಗೂ ಪ್ರಮಾಣಿಕ ಮನುಷ್ಯರಾಗಿದ್ದರು.

4. ಮುಕರ್‌ರಮಾ ಸಾಜಿದಾ ಪರ್‌ವೀನ್ ಸಾಹಿಬಾ (ಮುಕರ್‌ರಮ್ ಬಶಾರತ್ ಅಹ್ಮದ್ ಸಾಹಿಬ್ ಕಲಾಸ್‌ವಾಲ ಜಿಲ್ಲಾ ಸಿಯಾಲ್ಕೋಟ್) ದಿವಂಗತೆ 12 ಏಪ್ರಿಲ್ 2015 ರಂದು ಎರಡು ವರ್ಷಗಳ ಅನಾರೋಗ್ಯದ ನಂತರ 47ನೇ ವಯಸ್ಸಿನಲ್ಲಿ ನಿಧನರಾದರು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್. ದಿವಂಗತೆಗೆ ದೀರ್ಘ ಅವಧಿಯವರಿಗೆ ಕಲಾಸ್‌ವಾಲಾ ಸಿಯೊಲ್ಕೋಟಿನ ಸದರ್ ಲಜ್ನ ಆಗಿ ಸೇವೆ ಸಲ್ಲಿಸುವ ಭಾಗ್ಯ ದೊರಕಿತ್ತು. ಅವರು ಮೂಸಿ ಕೂಡಾ ಆಗಿದ್ದರು. ಜಮಾಅತ್ತಿನ ಕಾರ್ಯಗಳಿಗಾಗಿ ಯಾವಾಗಲೂ ಸಿದ್ಧರಾಗಿರುತ್ತಿದ್ದರು.

5. ಮುಕರ್‌ರಮ್ ಹಫೀಝ್ ಅಹ್ಮದ್ ಸಾಹಿಬ್ (ಶಫೀ ಮುಹಮ್ಮದ್ ಸಾಹಿಬ್ ರಬ್ವಾ ಅವರ ಪುತ್ರರು) ದಿವಂಗತರು 21 ಮೇ 2015 ರಂದು ತಮ್ಮ 66ನೇ ವಯಸ್ಸಿನಲ್ಲಿ ನಿಧನರಾದರು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್. ಅವರು ಬಹಿಶ್ತಿ ಮಖ್ಬರದ ಸದಸ್ಯರಾಗಿದ್ದರು ಮತ್ತು ದಾರುಸ್ಸದರ್ ರಬ್ವಾದಲ್ಲಿ Tube well operator ಆಗಿ ಕೆಲಸ ಮಾಡುತ್ತಿದ್ದರು.

6. ಮುಕರ್‌ರಮ್ ಬಶೀರ ಬೇಗಂ ಸಾಹೇಬಾ (ಮುಕರ್‌ರಮ್ ಚೌದುರಿ ಅಬ್ದುಲ್ ಲತೀಫ್ ಸಾಹೇಬ್‌ರವರ ಪತ್ನಿ ರೋನ್‌ಹಾಯಮ್, ಜರ್ಮನಿ) ದಿವಂಗತೆ 7 ಮೇ 2015 ರಂದು ಜರ್ಮನಿಯಲ್ಲಿ ನಿಧನರಾದರು. ಇನ್ನ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್. ಅವರು ಹಝ್‌ರತ್ ಅಕ್‌ದಸ್ ಮಸೀಹ್ ಮೌದ್(ಅ) ರ ಸಹಾಬಿ ಹಝ್‌ರತ್ ಮಿಯಾದೀನ್ ಮೊಹಮ್ಮದ್ ಸಾಹೇಬ್‌ರವರ ಪತ್ನಿ ಹಾಗೂ ಮುಕರ್‌ರಮ್ ಗುಲಾಮ್ ಮುಹಮ್ಮದ್ ಅಖ್ತರ್ ಸಾಹೇಬ್ ಮಾಜಿ ನಾಝಿರ್ ಆಲ ಸದರ್, ಅಂಜುಮನ್ ಅಹ್ಮದಿಯ, ಅವರ ಸಹೋದರ ಪುತ್ರಿಯಾಗಿದ್ದರು ಅವರ ಪುತ್ರ ಮುಕರ್‌ರಮ್ ಶಾಹಿದ್ ಲತೀಫ್ ಅಂಜುಂ ಸಾಹೇಬ್ ರೋನ್ ಹಾಯೆಮ್ ಜಮಾಅತಿನ ಸದರ್ ಹಾಗೂ ಅಸಿಸ್ಟೆಂಟ್ ನ್ಯಾಷನಲ್ ಸೆಕ್ರೆಟರಿ ಝಿಯಾಫತ್ ಆಗಿ ಸೇವೆ ಸಲ್ಲಿಸುತ್ತಿದ್ದರು. ದಿವಂಗತೆಯರು ಮೂಸಿಯಾಗಿದ್ದರು.

ಜನಾಝಾ ನಮಾಝು ನಿರ್ವಹಣೆಯ ನಂತರ ಹುಝೂರ್(ಅಬಿಅ) ಮಸೀದಿಯ ಸಭಾಂಗಣಕ್ಕೆ ಆಗಮಿಸಿದರು. ಕಾರ್ಯಕ್ರಮದನ್ವಯ ಆಮೀನ್ ಸಮಾರಂಭ ಏರ್ಪಟ್ಟಿತ್ತು.

**ಆಮೀನ್ ಸಮಾರಂಭ**

ಹುಝೂರ್(ಅಬಿಅ) ಪ್ರೀತಿಪೂರ್ವಕವಾಗಿ ಕೆಳಗೆ ನಮೂದಿತ 24 ಬಾಲಕ ಬಾಲಕಿಯರಿಂದ ಪವಿತ್ರ ಖುರ್‌ಆನಿನ ಒಂದೊಂದು ವಚನವನ್ನು ಆಲಿಸಿದರು ಮತ್ತು ಕೊನೆಯಲ್ಲಿ ದುಆ ಮಾಡಿಸಿದರು.

ಅಝೀಝುಮ್ ಅಝಾನದ ,ಹೂದ್, ಅಝೀಮ್ ಅಹ್ಮದ್, ಶಾಯಾನ್ ಅಹ್ಮದ್, ತಫ್ರೀದ್ ಅಹ್ಮದ್, ಖಾಹಿರ್ ಅಹ್ಮದ್, ಸಫ್ವಾನ್ ಅಹ್ಮದ್ ಜಾವೇದ್, ಫರೀದ್ ಝಕರೀಯ, ಖಾಕಾನ್ ರಶೀದ್, ರಾನಾ ಫರ್‌ಹಾನ್ ಅಹ್ಮದ್, ಇಬ್ತಿಸಾನ್ ಖಾನ್, ಝಾಹಿರ್ ನದೀಮ್ ಭಟ್ಟಿ, ಅಹ್ಸನ್ ಅಫ್ಜಾಲ್, ಈಶಾನ್ ಅಹ್ಮದ್, ತೌಕೀಲ್ ಅಹ್ಮದ್.

ಅಝೀಝು ತಾಬೀರ್ ನಾಸಿರ್ ಡೋಗರ್, ಮನಾಲ್ ಹಬೀಬ್, ಗುಲ್ ನತಾಶ ಖಾನ್ ಜಾವೇದ್, ಸತ್ವತ್ ತಾಹಿರ್, ಅಲೀನ್ ಅಹ್ಮದ್, ರಿದಾ ಅಹ್ಸನ್, ಅದೀಬ ಅಹ್ಮದ್, ಫರೀಹ ಶೆಹ್ಝಾದ್, ಶಾಫಿಯಾ ಅಫ್ಝಲ್, ಗಝಾಲ ಶಾದ್.

ಆಮೀನ್ ಸಮಾರಂಭದ ನಡುವೆ ಓರ್ವ ಬಾಲಕಿಯು ಹುಝೂರ್(ಅಬಿಅ) ರವರ ಸೇವೆಯಲ್ಲಿ ತಮ್ಮ ಪ್ರೀತಿಯ ಇಮಾಮರನ್ನು ಆಶೀರ್ವದಿಸಲು ಪ್ರಾರ್ಥಿಸಿಕೊಂಡರು. ಹುಝೂರ್(ಅಬಿಅ) ಪ್ರೀತಿಪೂರ್ವಕವಾಗಿ ಬಾಲಕಿಯರನ್ನು ಆಶೀರ್ವದಿಸಿದರು. ಆ ಅದೃಷ್ಟಶಾಲಿ ಬಾಲಕಿಯು ಈ

ಕೆಲವು ಕ್ಷಣಗಳಲ್ಲಿ ಪ್ರಾರ್ಥನೆಗಳ ನಿಧಿ ಮತ್ತು ಅನಗ್ರಹಗಳನ್ನು ಪಡೆದು ಅಲ್ಲಿಂದ ಮರಳಿದಳು.

ಅನಂತರ ಹುಝೂರ್(ಅಬಿಅ) ಝೊಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝು ನಿರ್ವಹಣೆಯ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು.

**Die Zeit ವಾರ್ತಾ ಪತ್ರಿಕೆಗೆ ನೀಡಿದ ಹುಝೂರರ ಸಂದರ್ಶನ**

ಕಾರ್ಯಕ್ರಮದನ್ವಯ 5:30 ಗಂಟೆಗೆ ಹುಝೂರ್(ಅಬಿಅ) ತಮ್ಮ ಕಛೇರಿಗೆ ಆಗಮಿಸಿದರು. ಜರ್ಮನಿಯ ಒಂದು ಸುಪ್ರಸಿದ್ಧ ವಾರ್ತಾ ಪತ್ರಿಕೆ "Die Zeit Daline Adition ನ ಪತ್ರಕರ್ತರಾದ ತಾಹಿರ್ ಚೌದರಿ ಸಾಹೇಬ್ ಸಂದರ್ಶನಕ್ಕಾಗಿ ಬಂದಿದ್ದರು.

ತಾಹಿರ್ ಚೌದರಿ ಸಾಹೇಬ್‌ರವರು ಅಹ್ಮದಿ ಯುವಕರಾಗಿದ್ದಾರೆ ಮತ್ತು ವಿಶ್ವವಿದ್ಯಾನಿಲಯದಲ್ಲಿ (ಜರ್ನಲಿಝ್ಮ್) ಪತ್ರಿಕೋದ್ಯಮ ಶಿಕ್ಷಣ ಪಡೆಯುತ್ತಿದ್ದರು. ಅವರು Die Zeit ವಾರ್ತಾ ಪತ್ರಿಕೆಗೆ ಸಂಬಂಧಿಸಿದವರಾಗಿದ್ದಾರೆ. ಅವರು ಹಲವು ರಾಜಕಾರಿಣಿಗಳು, ಕ್ರೀಡಾಪಟುಗಳು, ಸಾಮಾಜಿಕ ತಜ್ಞರೊಂದಿಗೆ ಸಂದರ್ಶನ ನಡೆಸಿರುತ್ತಾರೆ.

Die Zeit ಪತ್ರಿಕೆಯು ಒಂದು ಸಾಪ್ತಾಹಿಕ ಪತ್ರಿಕೆಯಾಗಿದೆ. ಅದು 1946 ರಿಂದ ಪ್ರತಿ ಗುರುವಾರ ಪ್ರಕಟಗೊಳ್ಳುತ್ತದೆ. ಮಾಜಿ ಚಾನ್ಸಲರ್ ಶಂಟ್ ಈ ಪತ್ರಿಕೆಯ ಮುದ್ರಕರಾಗಿದ್ದಾರೆ. ಮತ್ತು ಓರ್ವ ಇಟಲಿಯನ್ ಪತ್ರಕರ್ತರು ಅದರ ಮುಖ್ಯ ಸಂಪಾದಕರಾಗಿದ್ದಾರೆ. ಇದು ಸರಾಸರಿ 5,00,000 ಗಳ ಸಂಖ್ಯೆಯಲ್ಲಿ ಮಾರಾಟವಾಗುತ್ತದೆ. ಅದರ ಓದುಗರ ಸಂಖ್ಯೆ ಒಂದೂವರೆ ಮಿಲಿಯನ್ ಆಗಿದೆ. ಮತ್ತು Online edition ನ್ನು Internet ಮೇಲೆ ನೋಡುವವರ ಸಂಖ್ಯೆ ಸುಮಾರು 5 ಮಿಲಿಯನ್ ಆಗಿರುತ್ತದೆ.

**ಪತ್ರಕರ್ತರಾದ ತಾಹಿರ್ ಅಹ್ಮದ್ ಸಾಹೇಬ್ ಮೊದಲ ಪ್ರಶ್ನೆ ಮಾಡಿದ್ದು ಇದು: ಇಸ್ಲಾಮಿನ ಇಂದಿನ ಸ್ಥಿತಿಯ ಕುರಿತು ನಿಮ್ಮ ಅಭಿಪ್ರಾಯವೇನು ಮತ್ತು ಇಸ್ಲಾಮಿನ ಅವನತಿಗೆ ಮೂಲಭೂತ ಕಾರಣಗಳೇನು?**

ಈ ಪ್ರಶ್ನೆಯ ಉತ್ತರ ನೀಡುತ್ತಾ ಹುಝೂರ್(ಅಬಿಅ) ಹೇಳಿದರು. ಇಸ್ಲಾಮಿನ ಅವನತಿಯ ಮೂಲಭೂತ ಕಾರಣಗಳನ್ನು ತಿಳಿಯಬೇಕಾದರೆ ನಮಗೆ ಇಸ್ಲಾಮಿನ ಪ್ರಾಥಮಿಕ ಕಾಲಕ್ಕೆ ಹೋಗಬೇಕಾಗುತ್ತದೆ. ಇಸ್ಲಾಮಿನ ಪ್ರಾಥಮಿಕ ಹಂತದಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ಆಗಮಿಸಿ ಒಂದು ಹದಗೆಟ್ಟ ಸಮುದಾಯವನ್ನು ಸರಿಪಡಿಸಿದರು ಮತ್ತು ಅವರನ್ನು ಮಾನವನನ್ನಾಗಿ ಮಾಡಿದರು. ಹಝ್ರತ್ ಅಖ್‌ದಸ್ ಮಸೀಹ್ ಮೌವೂದ್(ಅ) ಹೇಳಿದಂತೆ ಅವರು ದಾನವರನ್ನು ಮಾನವರನ್ನಾಗಿ ಮಾಡಿದರು, ವಿದ್ಯಾವಂತ ಮಾನವರನ್ನಾಗಿ ಮಾಡಿದರು.

ಆಗ ಆ ಜನರು ಅಲ್ಲಾಹನನ್ನು ಗುರುತಿಸತೊಡಗಿದರು. ಅವರು ಉತ್ತಮ ಸ್ಥಿತಿಗೆ ಬಂದರು ಮತ್ತು ಅವರಲ್ಲಿ ತುಂಬಾ ಬದಲಾವಣೆಯಾಯಿತು. ಆಗ ರಸೂಲುಲ್ಲಾಹ್(ಸ) ಈ ಭವಿಷ್ಯವಾಣಿಯನ್ನು ಮಾಡಿದರು: ಒಂದು ಕಾಲ ಬರುವುದು. ಆಗ ಜನರ ಸ್ಥಿತಿ ಮತ್ತೊಮ್ಮೆ ಹದಗೆಡುವುದು. ಆ ಕಾಲ ಹಿಂದಿನ ಕಾಲಕ್ಕಿಂತಲೂ ಹೆಚ್ಚು ದುಸ್ತರವಾಗುವುದು. ಆ ಸಮಯದಲ್ಲಿ ಪವಿತ್ರ ಖುರ್‌ಆನಿನಲ್ಲಿರುವ ಅಕ್ಷರವಂತೂ ಇರುತ್ತದೆ. ಆದರೆ ಅದನ್ನು ತಿಳಿಸಿ ಹೇಳುವ ಮತಪಂಡಿತರು ಕೆಟ್ಟು ಹೋದವರಾಗುವರು. ಅಂತಹ ಕಾಲ ಬಂದಾಗ ಓರ್ವ ವ್ಯಕ್ತಿ ಬಂದು ಮತ್ತೆ ಇಸ್ಲಾಮ್ ಧರ್ಮವನ್ನು ಲೋಕದಲ್ಲಿ ಪುನರುತ್ಥಾನಗೊಳಿಸುವನು, ಲೋಕದಲ್ಲಿ ವಿಶ್ವಾಸವನ್ನು ಖಾಯಂಗೊಳಿಸುವನು. ಈಮಾನ್ ಸುರಯ್ಯ (ಕೃತಿಕಾ) ನಕ್ಷತ್ರಕ್ಕೆ ಹೋದರೂ ಅದನ್ನು ಅಲ್ಲಿಂದ ಭೂಮಿಗೆ ತರುವನು.

ಇಂದು ಮುಸಲ್ಮಾನರ ಈ ದುಸ್ಥಿತಿ ಹಝ್ರತ್ ರಸೂಲುಲ್ಲಾಹ್(ಸ) ರವರ ಭವಿಷ್ಯವಾಣಿಯ ಪ್ರಕಾರವೇ ಇದೆ. ಅದರ ಪರಿಹಾರ ಚಿಕಿತ್ಸೆಯನ್ನೂ ಹಝ್ರತ್ ರಸೂಲುಲ್ಲಾಹ್(ಸ) ಹೇಳಿಕೊಟ್ಟಿರುವರು. ಅಂತಹ ಕಾಲ ಬಂದಾಗ ಮುಸಲ್ಮಾನರ ಸುಧಾರಣೆಗಾಗಿ, ಅವರ ಮಾರ್ಗದರ್ಶನಕ್ಕಾಗಿ, ಇಮಾಮ್ ಮಹದಿ ಬರುವರು. ಅವರನ್ನು ಸ್ವೀಕರಿಸಬೇಕು ಮತ್ತು ಅವರಿಗೆ ನನ್ನ ಸಲಾಮ್ ತಲುಪಿಸಬೇಕು. ಅವರನ್ನು ಸ್ವೀಕರಿಸಿದರೆ ನಿಮ್ಮ ಸ್ಥಿತಿ ಸುದಾರಿಸುವುದು. ಇಲ್ಲವಾದರೆ ನೀವು ಅವನತಿಗೆ ಗುರಿಯಾಗುವಿರಿ. ಅವನತಿಯ ಕುರಿತು ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು. ಬನೀ ಇಸ್ರಾಯಿಲರ ಮೇಲೆ ಬಂದಂತಹ ಸ್ಥಿತಿ ನನ್ನ ಜನಾಂಗಕ್ಕೂ (ಉಮ್ಮತ್) ಬರುವುದು. ಅವರಲ್ಲಿ ಎಷ್ಟರ ಮಟ್ಟಿಗೆ ಸಾಮ್ಯತೆ ಇರುವುದೆಂದರೆ ಒಂದು ಕಾಲಿನ ಪಾದರಕ್ಷೆ ಇನ್ನೊಂದು ಕಾಲಿಗೆ ಹೇಗೆ ಹೋಲುತ್ತದೆಯೋ ಆ ರೀತಿ ಸಾಮ್ಯತೆ ಉಂಟಾಗುವುದು. ಅವರಲ್ಲಿ ಯಾರಾದರೂ ತನ್ನ ತಾಯಿಯ ಜೊತೆ ವ್ಯಭಿಚಾರವೆಸಗಿದವರಾಗಿದ್ದರೆ ನನ್ನ ಜನಾಂಗದಲ್ಲೂ ಅಂತಹವನೊಬ್ಬ ದುಷ್ಟ ಹುಟ್ಟಿ ಬರುವನು". ಇದರಿಂದ ಅವನತಿಯನ್ನು ಅಂದಾಜಿಸಬಹುದು. ಅವರು ನೈತಿಕ ನೆಲೆಯಲ್ಲೂ, ಧಾರ್ಮಿಕ ನೆಲೆಯಲ್ಲೂ ತೀರ ಅದಃಪತನಕ್ಕೆ ಗುರಿಯಾಗುವರು.

ಹಝ್ರತ್ ರಸೂಲುಲ್ಲಾಹ್(ಸ) ರವರ ಭವಿಷ್ಯವಾಣಿಯ ಪ್ರಕಾರ ಆ ಸಮಯದಲ್ಲಿ ಬರುವವರನ್ನು ಸ್ವೀಕರಿಸಿದರೆ ರಕ್ಷಣೆ ಹೊಂದುವಿರಿ. ಇಂದು ನಾವು ಅದನ್ನೇ ಕಾಣುತ್ತಿದ್ದೇವೆ. ಪ್ರತಿ ಪಂಥವು ಉಗ್ರವಾದದ ಶಿಕ್ಷಣ ನೀಡದಿರುತ್ತಿದ್ದರೂ ತನ್ನ ಕೃತ್ಯದಿಂದ ಉಗ್ರವಾದವನ್ನು ಪುಷ್ಟಿಕರಿಸುತ್ತದೆ ಮತ್ತು ಪ್ರತಿಪಾದಿಸುತ್ತದೆ, ಅಹ್ಮದಿಯಾ ಜಮಾಅತನ್ನು ಹೊರತುಪಡಿಸಿ. ನಮ್ಮ ಮೇಲೆ ಆಕ್ರಮಣವಾದರೂ ನಾವು ಸಹಿಸಿಕೊಳ್ಳುತ್ತೇವೆ. ಹಿಂಸೆಯ ಪ್ರತೀಕಾರವನ್ನು ದುಆ ಮತ್ತು ಸಹಿಷ್ಣುತೆಯಿಂದ ತೋರಿಸಿಕೊಡುತ್ತೇವೆ. ಶೌರ್ಯವನ್ನು ಪ್ರದರ್ಶಿಸುತ್ತೇವೆ. ಆದುದರಿಂದ ಈ ಪರಿಸ್ಥಿತಿಗಳು ಹಝ್ರತ್ ರಸೂಲುಲಾಹ್(ಸ) ರವರ ಭವಿಷ್ಯವಾಣಿಯ ಪ್ರಕಾರವೇ ಉಂಟಾಗಿವೆ. ಅದೇ ಭವಿಷ್ಯವಾಣಿಯಂತೆ ಬರುವವನು ಬಂದಾಗಿದೆ. ಅವನು ನಿಜವಾದ ಇಸ್ಲಾಮ್ ಧರ್ಮವನ್ನು ತೋರಿಸಿಕೊಟ್ಟಿರುವನು. ಎಲ್ಲಿಯವರೆಗೆ ಅವರನ್ನು ನಂಬುವುದಿಲ್ಲವೋ ಅವರ ಸ್ಥಿತಿ ಇನ್ನೂ ಹೆಚ್ಚು ಹದಗೆಡುತ್ತ ಹೋಗುವುದು. ಇದೇ ಮಾತನ್ನು ನಾನು ಎಲ್ಲ ಕಡೆ ನನ್ನ ಸಂದರ್ಶನ ಮತ್ತು ಸಂಬೋಧನೆಗಳಲ್ಲಿ ಹೇಳಿರುತ್ತೇನೆ. ಅಮೇರಿಕಾದಲ್ಲಿಯೂ, ಐರ್‌ಲ್ಯಾಂಡಿನಲ್ಲಿಯೂ, ಯು.ಕೆ ಯಲ್ಲಿಯೂ ಹೇಳಿದ್ದೇನೆ. ನನ್ನ ಸಂದೇಶ ಇದೇ ಆಗಿದೆ. ಎಲ್ಲಿಯವರೆಗೆ ಅಲ್ಲಾಹನು ಕಳುಹಿಸಿದವನನ್ನು ಸ್ವೀಕರಿಸುವುದಿಲ್ಲವೋ ಅಲ್ಲಿಯವರೆಗೆ ಮುಸಲ್ಮಾನರು ಹದಗೆಡುವರು.

**ಪತ್ರಕರ್ತರ ಮುಂದಿನ ಪ್ರಶ್ನೆ: ನಿಮ್ಮ ದೃಷ್ಟಿಯಲ್ಲಿ ಜನರಿಗೆ ಇಸ್ಲಾಮಿನ ಕುರಿತು ಇರುವ ದೊಡ್ಡ ತಪ್ಪು ಕಲ್ಪನೆ ಯಾವುದು?**

ಆಗ ಹುಝೂರ್(ಅಬಿಅ) ಹೇಳಿದರು. ನೀವು ಪತ್ರಕರ್ತರಾಗಿದ್ದೀರಿ. ನಿಮಗೆ ತಿಳಿದಿರಬಹುದು, ತಪ್ಪು ಕಲ್ಪನೆ ಯಾವುದು ಎಂದು. ಅತ್ಯಂತ ದೊಡ್ಡ ತಪ್ಪು ಕಲ್ಪನೆಯ ಬಗ್ಗೆ ನಾನು ಈಗಾಗಲೇ ತಿಳಿಸಿರುತ್ತೇನೆ. ಅದು ಇಸ್ಲಾಮಿನಲ್ಲಿ ಇಲ್ಲದಂತಹ ಶಿಕ್ಷಣ ವ್ಯವಸ್ಥೆ. ಹಿಂದಿನ ಕಾಲದಲ್ಲಿ ದಾಯಿಷ್ ನೇತಾರರೊಬ್ಬರು ಒಂದು ಹೇಳಿಕೆಯನ್ನು ನೀಡಿದ್ದರು. ನಾಲ್ಕು ಐದು ದಿನಗಳ ಹಿಂದೆ ಅವರ ಈ ಹೇಳಿಕೆ ಬಂದಿತ್ತು. ಇಸ್ಲಾಮ್ ಜಿಹಾದ್ ಹಾಗೂ ಉಗ್ರವಾದದ ಧರ್ಮವಾಗಿದೆ. ಅದರಲ್ಲಿ ಪ್ರೀತಿ, ಸ್ನೇಹ ಮತ್ತು ಸಹೋದರತೆಯ ಯಾವ ಮಾತೂ ಇಲ್ಲ. ಇಂತಹ ಭಾವನೆಗಳು ಹುಟ್ಟಿಕೊಳ್ಳುವಾಗ ಅವುಗಳ ಪರಿಣಾಮ ಸ್ಪಷ್ಟವಿದೆ. ಸೌದಿ ಅರೇಬಿಯಾದ ಉದಾಹರಣೆಯನ್ನೇ ತೆಗೆದುಕೊಳ್ಳಿ. ಒಂದೆಡೆ ತಾವು ಅಲ್ಲಾಹನ ಆರಾಧನಾ ಗೃಹದ ಉಸ್ತುವಾರಿ ವಹಿಸಿಕೊಂಡವರಾಗಿದ್ದೇವೆ ಎನ್ನುತ್ತಾರೆ. ತಮ್ಮ ಪವಿತ್ರ ಭೂಮಿಯಲ್ಲಿ ಮಹೋನ್ನತ, ಖಾತಮುನ್ನಬಿಯ್ಯೀನ್ ರಸೂಲ್(ಸ) ರ ಸಮಾಧಿ ಇದೆ ಎನ್ನುತ್ತಾರೆ. ಇಲ್ಲಿ ತಾವು ಯಾವುದೇ ತಾರತಮ್ಯ (discrimination) ಇಲ್ಲದೆ ಎಲ್ಲ ಮುಸ್ಲಿಂ ಪಂಥದವರಿಗೆ ಹಜ್ಜ್ ಕರ್ಮ ನಿರ್ವಹಿಸಲು ಅನುಮತಿ ನೀಡುತ್ತೇವೆ, ಅವರು ಮದೀನಕ್ಕೂ ಹೋಗುತ್ತಾರೆ ಹಾಗೂ ಉಳಿದ ಎಲ್ಲ ಹಜ್‌ನ ಕ್ರಿಯೆಗಳನ್ನು ನಿರಾಂತಕವಾಗಿ ನಿರ್ವಹಿಸುವ ಅನುಮತಿ ಇದೆ. ಆದರೆ ಅದರ ಹೊರತಾಗಿಯೂ ಅವರು ಅಹ್ಮದಿಯಾ ಮುಸ್ಲಿಮರಿಗೆ ಹಜ್ ಮಾಡಲು ಅನುಮತಿ ನೀಡುತ್ತಿಲ್ಲ.

ಅಹ್ಮದೀಯರು ತಮ್ಮನ್ನು ಮುಸ್ಲಿಮರೆಂದು ಹೇಳಿಕೊಳ್ಳುತ್ತಾರೆ. ಕಲಿಮವನ್ನು ಉಚ್ಚರಿಸುತ್ತಾರೆ. ರಸೂಲುಲ್ಲಾಹ್(ಸ) ರವರ ಹದೀಸಿನ ಪ್ರಕಾರ ಯಾರು "ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದ್ ರಸೂಲುಲ್ಲಾಹ್" ಎಂಬ ಕಲಿಮವನ್ನು ಉಚ್ಚರಿಸುತ್ತಾನೋ ಅವನು ಮುಸಲ್ಮಾನನಾಗಿದ್ದಾನೆ. ಅಲ್ಲದೆ ಅವರು ಹೀಗೆ ಹೇಳಿದ ಒಂದು ವರದಿಯೂ ಇದೆ. "ಯಾರು ಲಾ ಇಲಾಹ ಇಲ್ಲಲ್ಲಾಹ್" ಎಂದು ಹೇಳುವನೋ ಅವನು ಮುಸಲ್ಮಾನನಾಗಿದ್ದಾನೆ ಎಂದು. ಕಲಿಮ ಉಚ್ಚರಿಸುವ, ಅಹ್ಮದೀಯರಲ್ಲದ ಮುಸ್ಲಿಮರ ಜೊತೆಯಲ್ಲೂ ಈಗ ಬೇಧಭಾವ ಮಾಡಲಾಗುತ್ತದೆ. ಉದಾಹರಣೆಗೆ ಯಮನ್‌ನಲ್ಲಿ ನಡೆಯುತ್ತಿರುವ ಯುದ್ಧ. ಅದು ಗುಂಪುಗಾರಿಕೆಯ ಯುದ್ಧವಾಗಿದೆ. ಒಂದೆಡೆ ನಾವು ಎಲ್ಲ ಪಂಥದವರಿಗೆ ಯಾವುದೇ ತಾರತಮ್ಯವಿಲ್ಲದೆ ಅನುಮತಿ ನೀಡುತ್ತೇವೆ ಎನ್ನುತ್ತಾರೆ. ಇನ್ನೊಂದೆಡೆ ಅವರು ಪಂಥಾಧಾರಿತ ಯುದ್ಧ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ ಎರಡು ದಿನಗಳ ಮೊದಲು ಸೌದಿ ಅರೇಬಿಯಾದಲ್ಲಿ ಒಂದು ಘಟನೆ ನಡೆಯಿತು. ಅಲ್ಲಿ ಒಂದು ಶಿಯಾ ಪಂಥದವರ ಮಸೀದಿ ಅಥವಾ ಪ್ರಾರ್ಥನಾಲಯವಿತ್ತು. ಅಲ್ಲಿ ಆಕ್ರಮಣವಾಯಿತು. 22 ಜನರು ಹತರಾದರು ಮತ್ತು ಹಲವರು ಗಾಯಗೊಂಡರು. ಅಲ್ಲಿಯೂ ಇಂತಹ ಕ್ಷೋಬೆ ನಡೆಯಿತು. ಇವೆಲ್ಲಾ ಅವರು ಮಾಡುತ್ತಿರುವ ಕಾರಸ್ಥಾನವಾಗಿದೆ.

ಮತ್ತೆ ಸಲಫಿ ಎಂಬುವುದು ಸೌದಿ ಅರೇಬಿಯಾರ ಸೃಷ್ಟಿಯಾಗಿವೆ. ಅದೇ ರೀತಿ ಉಗ್ರವಾದಿಗಳು ವಹಾಬಿಗಳಾಗಿದ್ದಾರೆ. ಇವೆಲ್ಲ ಘಟನೆಗಳು ತೋರಿಸಿಕೊಡುವುದೇನೆಂದರೆ ಆ ಜನರು ಮತ್ತು ಆ ಸ್ಥಳವನ್ನು ಮುಸ್ಲಿಮರ ಎಲ್ಲ ಪಂಥಗಳು ಪವಿತ್ರವೆಂದು ನಂಬಿರುವುವು. ಅಲ್ಲಿಯ ದೊರೆಗಳು ಅಲ್ಲಿಯ ಮತವನ್ನು ಅನುಸರಿಸುವ ಕಾರಣ ಆದರಿಸಲ್ಪಡುತ್ತಾರೆ. ಅದರ ಹೊರತಾಗಿಯೂ ಆ ಜನರು ಮುಸ್ಲಿಮರೊಂದಿಗೆ ಈ ರೀತಿ ವರ್ತಿಸುತ್ತಾರೆ. ಅವರ ಮನದಲ್ಲಿರುವ ದ್ವೇಷಭಾವನೆಗಳು ಈಗ ರಹಸ್ಯವಾಗಿ ಉಳಿದಿಲ್ಲ. ಅದರೂ ಅವರು ತಮ್ಮನ್ನು ಇಸ್ಲಾಮಿನ ರಕ್ಷಕರು, ಇಸ್ಲಾಮಿನ ಸುಧಾರಕರು ಎಂದು ಭಾವಿಸುತ್ತಾರೆ.

ಈಗಂತೂ ಉಗ್ರವಾದ ಮಿತಿಮೀರಿ ಬೆಳೆದಿದೆ. ಅದು ಎಲ್ಲ ಕಡೆ ಹರಡಿದೆ, ಹರಡುತ್ತಿದೆ. ಇಸ್ಲಾಮಿನ ಈ ರೂಪವೇ ಅದರ ವಿರುದ್ಧವಿರುವ ಅತಿ ದೊಡ್ಡ ಆರೋಪವಾಗಿದೆ. ಅಹ್ಮದಿಯಾ ಜಮಾಅತಿನವರಾದ ನಾವು ಹೇಳುತ್ತೇವೆ: ನೀವು ಜಮಾಅತಿನ ಮೇಲೆ ಜಿಹಾದಿ ಆಗುವ ಆರೋಪ ಹಚ್ಚುತ್ತೀರಿ ಅಥವಾ extremist ಅಥವಾ Terrorist ಎನ್ನುತ್ತೀರಿ. ಕೇವಲ ನೀವು ಮಾತ್ರ ಸರಿ ಎಂದು ಭಾವಿಸುತ್ತೀರಿ. ಇವೆಲ್ಲ ಆರೋಪಗಳು ತಪ್ಪಾಗಿರುತ್ತವೆ. ಅವು ಪವಿತ್ರ ಖುರ್‌ಆನಿನಿಂದಲೂ ಹದೀಸುಗಳಿಂದಲೂ ಸಾಬೀತಾಗುವುದಿಲ್ಲ. ಜಮಾಅತಿನ ನಡಾವಳಿಕೆಗಳಿಂದಲೂ ನೀವು ಈ ಆರೋಪಗಳನ್ನು ಸಾಬೀತುಗೊಳಿಲು ಸಾಧ್ಯವಿಲ್ಲ.

**ಪತ್ರಕರ್ತರು ಇನ್ನೊಂದು ಪ್ರಶ್ನೆ ಮಾಡಿದರು. ಈ ಸಮಯ ಲೋಕದಲ್ಲಿ ನಾವು ಯಾವ Conflict ನೋಡುತ್ತಿದ್ದೇವೆಯೋ ಅದರಲ್ಲಿ ಮುಸಲ್ಮಾನರು ಒಬ್ಬರು ಇನ್ನೊಬ್ಬರ ಕುತ್ತಿಗೆಯನ್ನು ಕೊಯ್ಯುತ್ತಿದ್ದಾರೆ. ನೀವು ಯಾರನ್ನು ಹೆಚ್ಚು ದ್ವೇಷಿಗಳು ಎನ್ನುವಿರಿ? ಮುಸ್ಲಿಮರಿಗೆ ಅಥವಾ ಪಾಶ್ಚಿಮಾತ್ಯ ಶಕ್ತಿಗಳಿಗೆ ಎದುರಾಗಿ ಅವರು ತಮ್ಮ ಹಿತಕ್ಕೋಸ್ಕರ ಇದನ್ನೇ ಮಾಡುತ್ತಿದ್ದಾರೆ.**

ಆಗ ಹುಝೂರ್ ಹೇಳಿದರು. ಒಬ್ಬನು ಬುದ್ಧಿ ಉಪಯೋಗಿಸದೆ ಇತರರ ತಪ್ಪು ಮಾತುಗಳಿಗೆ ಒಪ್ಪಿ ತನ್ನ ಸಹೋದರನ ಕುತ್ತಿಗೆಯನ್ನು ಕೊಯ್ಯುವವನಾದರೆ ಹಾಗೆ ಮಾಡಲು ಪ್ರೇರೇಪಿಸುವವನು ಎಷ್ಟು ದೋಷಿಯೋ ಅವನೂ ಅಷ್ಟೇ ದೋಷಿಯಾಗುವನು. ಅವನು ಯಾವುದೇ ದೇಶದವನಾಗಿರಲಿ ಅಥವಾ ಪಂಥದವನಾಗಿರಲಿ ಅಥವಾ ಇಸ್ಲಾಮ್ ಧರ್ಮದ ಉನ್ನತಿಯನ್ನು ಆಶಿಸುವವನಾಗಿರಲಿ ಅಥವಾ ಯಾವುದೇ ರೀತಿಯಲ್ಲಿ ಇಸ್ಲಾಮಿನ ಶುಭಾಕಾಂಕ್ಷಿಯಾಗಿರಲಿ. ಏಕೆಂದರೆ ಈ ಸಮಯದಲ್ಲಿ ಧರ್ಮವನ್ನು ನಂಬುವವರು ಯಾರೇ ಆಗಿರಲಿ ಆ ಧರ್ಮವನ್ನು ಅನುಸರಿಸುವವರಾದರೆ ಅಥವಾ ಆ ಧರ್ಮದಲ್ಲಿ ಇರಬಯಸುವವರಾದರೆ ಅಥವಾ ತಮ್ಮ ಧರ್ಮವೇ ಸತ್ಯಧರ್ಮವಾಗಿದೆ ಎಂದು ನಂಬುವವರಾದರೆ ಮತ್ತು ಧರ್ಮ ಅನಿವಾರ್ಯವಾಗಿದೆ ಎಂದು ಭಾವಿಸುವವರಾದರೆ, ಅಂತಹವರಲ್ಲಿ ಹೆಚ್ಚಿನವರು ಮುಸ್ಲಿಮರು ಮಾತ್ರ ಕ್ರೈಸ್ತರಾಗಿದ್ದಾರೆ. ಅವರಲ್ಲಿ 75% ಕ್ಕಿಂತ ಹೆಚ್ಚಿನವರು ತಮ್ಮ ಧರ್ಮವನ್ನು ತ್ಯಜಿಸಿದವರಾಗಿರುತ್ತಾರೆ.

ಒಂದು ಕಾಲದಲ್ಲಿ ಹೇಳಲಾಗುತಿತ್ತು: ಅಮೇರಿಕದಲ್ಲಿ ಧಾರ್ಮಿಕ ಜನರು ತುಂಬ ಇದ್ದಾರೆಂದು. ಈಗ ಬಂದ ವರದಿಯ ಪ್ರಕಾರ ಹೆಚ್ಚಿನ ಜನರು ಧರ್ಮದಲ್ಲಿ ತಮಗೆ ಯಾವ ಆಸಕ್ತಿಯೂ ಇಲ್ಲ ಎಂದಿರುವವರು. ಧರ್ಮವನ್ನು ನಂಬುವವರ ಸಂಖ್ಯೆ ವೇಗವಾಗಿ ಇಳಿಯುತ್ತಿದೆ. ಹಿಂದೆ 90% ಇದ್ದದ್ದು ಈಗ ಎರಡು ಮೂರು ವರ್ಷಗಳಲ್ಲಿ 70% ಆಗಿರುತ್ತದೆ. ಈ ಸಂಖ್ಯೆಯು ಜನರು ಧರ್ಮದಿಂದ ದೂರವಾಗುತ್ತಿರುವ ಸಂಕೇತವಾಗಿದೆ. ಅಲ್ಲಿ ಇಸ್ಲಾಮಿನ ಸರ್ವೆಯೂ ನಡೆದಿದೆ. ಅದರ ಬಗ್ಗೆ ಹಿಂದಿನ ಪತ್ರಿಕೆಗಳಲ್ಲಿ ವರದಿ ಬಂದಿತ್ತು. ಯಹೂದಿಯವರಲ್ಲೂ, ಬಹುವೇಗವಾಗಿ, ಜನರು ಧರ್ಮದಲ್ಲಿ ಆಸಕ್ತಿ ಕೆಳೆದುಕೊಳ್ಳುತ್ತಿದ್ದಾರೆ. ಅವರ ಸಂಖ್ಯೆಯೂ ದಿನೇ ದಿನೇ ಹೆಚ್ಚುತ್ತಾ ಇದೆ.

ಮುಸಲ್ಮಾನರಿಗೆ ಧರ್ಮದಲ್ಲಿ ಆಸಕ್ತಿಯಿದೆ. ಅವರು ತಮ್ಮ ಧರ್ಮವನ್ನು ಸರಿಯಾದುದಾಗಿದೆ ಎಂದು ನಂಬಿರುತ್ತಾರೆ. ಆದುದರಿಂದ ಧರ್ಮಕ್ಕೆ ವಿರುದ್ಧ ಇದ್ದವರು ಇಸ್ಲಾಮ್ ಧರ್ಮವು ಉಳಿಯಬಾರದು ಎಂದು ಬಯಸುತ್ತಾರೆ. ಅದು ಎಂದಿಗೂ ಸಾಧ್ಯವಿಲ್ಲ. ಅದಕ್ಕಾಘಿಯೇ ಆ ಸಮುದಾಯಗಳು ಮುಸಲ್ಮಾನರಿಗೆ ದಾರಿ ತಪ್ಪಿಸುತ್ತಿದೆ. ದೇಶಗಳನ್ನು ವಿವಿಧ ಗುಂಪುಗಳನ್ನು ಉಗ್ರವಾದಕ್ಕೆ ಪ್ರೇರೇಪಿಸುತ್ತಿದೆ. ಅವೆಲ್ಲ ಗುಂಪುಗಳು ಅವರದ್ದೇ ಸೃಷ್ಟಿಯಾಗಿವೆ. ಈ ಮಾತನ್ನು ಹಲವು ಕಡೆ ನಾನು ಹೇಳಿರುತ್ತೇನೆ. ಹಿಂದಿನ ದಿನಗಳಲ್ಲಿ Peace Symposium ಸಂದರ್ಭದಲ್ಲಿ ಈ ಮಾತನ್ನೇ ಹೇಳಿದ್ದೆ ISIS ಅವರ ಬಳಿ ಯಾವ Industry ಇಲ್ಲ, ಯಾವ ಆಯುಧಗಳೂ ಇಲ್ಲ. ವೈಜ್ಞನಿಕ ಸಂಶೋಧನೆಯ ಇಚ್ಛಾಶಕ್ತಿಯೂ ಇಲ್ಲ. ಇದಕ್ಕೆ ಬೇಕಾಗುವ ಸಾಮಾಗ್ರಿಗಳು ಅವರ ಬಳಿ ಇಲ್ಲ ಅವರ ಆರ್ಥಿಕತೆಯು ಶಕ್ತಿಯುತವಾಗಿರಲು ಸಾಧಯವಿಲ್ಲ. ISIS ರವರ ಆರ್ಥಿಕ ಶಕ್ತಿ ದಿನೇ ದಿನೇ ಹೇಗೆ ಹೆಚ್ಚುತ್ತ ಇದೆ? ಅವರು ಹೇಳುತ್ತಾರೆ ಅವರ ಒಂದು ದಿನದ ಆದಾಯ ಆರು ಮಿಲಿಯನ್ ಡಾಲರ್ ಆಗಿದೆ. ಅವರು ಇರಿಸಿರುವ ಸಿಬ್ಬಂಧಿಗಳ ವೇತನ ಹಾಗೂ ಅವರ ಖರ್ಚು ಒಂದು ಮಿಲಿಯನ್ ಡಾಲರ್ ಆಗಿದೆ ಉಳಿದ ಮೊತ್ತ ಹೇಗೆ ಅವರು ಸಂಪಾದಿಸುತ್ತಿದ್ದಾರೆ. ಓಗ ಪ್ರಶ್ನೆ ಉದ್ಭವವಾಗುವುದೇನಂದರೆ ಈ ಹಣ ಎಲ್ಲಿಂದ ಬರುತ್ತಿದೆ.? ಎಂದು

ಈಗ ನೋಡಿ ಇರಾನ್ ಒಂದು ಸ್ಥಾಪಿಸಿದ ಒಂದು ಪ್ರಾಚೀನ ದೇಶವಾಗಿದೆ. ಅವರ ಒಂದು ಆರ್ಥಿಕತೆ ಇದೆ ಮತ್ತು ಅವರ ಒಂದು ನಿಯುವಾವಳಿ ಇದೆ. ಅವರ ಒಂದು Infranstructure ಇದೆ. ಲೋಕದಾದ್ಯಂತ ವ್ಯಾಪಾರ ಮತ್ತು ಸಂಬಂಧಗಳಾಗಿವೆ. ಇದರ ಹೊರತಾಗಿಯೂ ಅವರ ಮೇಲೆ ಬಂಧನಗಳನ್ನು ಹೇರಿಸಿದರೆ ಅವರ ಈ ತೈಲ ಉತ್ಪಾದನೆಯು ಶೇ. 70ಇಷ್ಟಿಗೆ ತಲುಪುತ್ತದೆ. ಆದರೆ ISIS ರವರದ್ದು ಕಡಿಮೆ ಆಗುವುದಿಲ್ಲ. ಅವರ ತೈಲವೂ ಹಾಗೆಯೇ ಸಮುದ್ರಕ್ಕೆ ಹೋಗಿ ಸೇರುತ್ತಿದೆ ಮತ್ತು Crude oil ನ್ನು ಬಾಟನ್‌ಗಳಲ್ಲಿ ತುಂಬಿ ಕಾರ್ಬೋಟ್ ಮುಖಾಂತರ Export ಆಗುತ್ತಿಲ್ಲವಲ್ಲ.

ವಾಸ್ತವವೇನೆಂದರೆ ಜನರು ಇಸ್ಲಾಂ ಧರ್ಮದಲ್ಲಿ ಯಾವುದಾದರು ಕಿಡಿಗೇಡಿತನವು ಹುಟ್ಟುತ್ತಾ ಇರಲಿ ಎಂದು ಬಯಸುತ್ತಾರೆ. ಇದು ಕಪಟ ವಿಶ್ವಾಸಿಗಳ ಐಕ್ಯವಾಗಿದೆ. ಇದು ಮೊದಲ ದಿನದಿಂದ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಕಾಲದಿಂದಲೇ ಹುಟ್ಟಿ ಬಂದಿವೆ. ನಂತರ ಇನ್ನಷ್ಟು ಹೆಚ್ಚಾಯಿತು. ಈಗ ಹೆಚ್ಚುತ್ತಲೇ ಬಂದಿರುತ್ತದೆ. ಈ ಜನರು ಇಸ್ಲಾಮಿನ ಕುರಿತು ಹಿತ ಬಯಸುವುದಿಲ್ಲ ಇಸ್ಲಾಮಿನ ವಿರುದ್ಧವಗಿವೆ ಮತ್ತು ದೊಡ್ಡ ಶಕ್ತಿಗಳ ಕೈಗಳಿಂದ ಬಲಿಪಶುವಾಗುತ್ತಿದ್ದಾರೆ. ಇವರಿಗೆ ಬೇಕಾದಷ್ಟು ಹಣ ದೊರೆತಿರುತ್ತದೆ.

ಒಂದು ಉತ್ತಮ ವರ್ಗವು ಇದೆ. ಅವರು ಇಸ್ಲಾಮಿನ ಸೇವೆ ಮಾಡಬಯಸುತ್ತಾರೆ. ಅವರು ಅಲ್ಲಿಗೆ ಹೋಗುತ್ತಾರೆ. ಯು.ಕೆ ಯಿಂದಲೂ ಮತ್ತು ಎಲ್ಲ ಸ್ಥಳಗಳಿಂದಲೂ ಆಸ್ಟ್ರೇಲಿಯಾಯಿಂದಲೂ, ಅಮೇರಿಕಾದಿಂದಲು, ಈಗ ಎಲ್ಲರೂ ಮೂಲಭೂತವಾದಿಗಳಾಗುತ್ತಿದ್ದಾರೆ. ಆಸ್ಟ್ರೇಲಿಯಾದಿಮದ ಈ ಹಿಂದೆ ಸುದ್ಧಿಯಾಗಿತ್ತು. ಕೆಲವು ಜನರ ಭಾವನೆಯಾಗಿತ್ತು. ಇದು ಸರಿಯಲ್ಲ. ಇದು ಮದ್ಯ ಮಾಡಲು ಬಯಸುತ್ತೇವೆ. ಆದರೆ ಅವರಿಗೆ ಮರಳುವ ಯಾವ ದಾರಿಯೂ ಇರಲಿಲ್ಲ ಒಂದು ಯುದ್ಧ ಮಾಡಿ ಸಾಯಬೇಕು. ಅಥವಾ ನಾವು ಹೇಳಿದ ಹಾಗೆ ಮಾಡಬೇಕು. ಹೊರಗೆ ಹೊಗುವ ಪ್ರಯತ್ನ ಮಾಡಿದರೆ ಆಗಲು ಮರಣವೇ ಗತಿ.ಅಥವಾ ನಾವು ಹೇಳಿದ ಹಾಗೆ ಮಾಡಬೇಕು. ಹೊರಗೆ ಹೋಗುವ ಪ್ರಯತ್ನ ಮಾಡಿದರೆ ಆಗಲೂ ಮರಣವೇ ಗತಿ. ಹೀಗೆ ಅವರು ಅವರಲ್ಲಿಯೇ ಉಳಿದುಕೊಂಡರು. ಈಗ ಆ ಜನರು ಸಂದೇಶವನ್ನು ಕಳುಹಿಸಿದ್ದಾರೆ.

ಅದೇ ರೀತಿ ಹಿಂದಿನ ದಿನಗಳಲ್ಲಿ ಒಂದು ಸಂಬೋಧನೆಯಲ್ಲಿ ನಾನು ಹೇಳಿದ್ದೆ. ಒಬ್ಬ ಫ್ರೆಂಚ್ ಪತ್ರಕರ್ತರನ್ನು ಸ್ವತಂತ್ರಗೊಳಿಸಿದರು. ಅವರು ಬಿಡುಗಡೆಯ ನಂತರ ಹೇಳಿದರು: ನನಗೆ ಖುರ್‌ಆನ್ ಮತ್ತು ಹದೀಸ್ ಏನು ಹೇಳುತ್ತದೆಯೋ ಅದಕ್ಕೂ ನಮಗೂ ಯಾವ ಸಂಬಂಧವೂ ಇಲ್ಲ. ನಾವು ಏನು ಹೇಳುತ್ತೇವೆಯೋ ಅದು ನಮಗೆ ಗೊತ್ತು. ಇದೀಗ ತಮ್ಮ ನೇತೃತ್ವ ಯಾವುದು ಎಂದು ಸಹ ಅವರಿಗೆ ಗೊತ್ತಿಲ್ಲ. ಮೊದಲು ಅಬೂಬಕ್ಕರ್ ಬಾಗ್ದಾದಿಯವರ ಹೆಸರು ಹೇಳಲಾಗುತ್ತಿತ್ತು. ಮತ್ತೆ ಸೆಕೆಂಡ್ ಇನ್ ಕಮಾಂಡ್ ಆದವನನ್ನೂ ತಾವು ಹೊಡೆದುರುಳಿಸಿದ್ದೇವೆಂದು ಇತ್ತೀಚಿನ ದಿನಗಳಲ್ಲಿ ಅಮೇರಿಕ ಘೋಷಣೆ ಮಾಡಿದೆ. ಈಗ ಮೂರನೆಯವನು ಯಾರು? ಅದೇ ರೀತಿ ಹಲವರಿದ್ದಾರೆ. ಅವರ ಹೆಸರಿನಿಂದ ಪ್ರಯೋಜನ ಪಡೆಯುತ್ತಿದ್ದಾರೆ. ಅಥವಾ ಆತ ಇನ್ನೊಬ್ಬನ ಕೈಗೊಂಬೆಯಾಗಿರುತ್ತಾನೆ. ದಾರವನ್ನೇ ಎಳೆದಾಡಬೇಕಾಗುತ್ತದೆ. ಒಮ್ಮೆ ಈ ಕಡೆ ಒಮ್ಮೆ ಆ ಕಡೆ.

ಹುಝೂರ್ ಹೇಳಿದರು: ನೀವು ಕೇಳುತ್ತೀರಿ ದೋಷಿಗಳು ಯಾರು ಎಂದು. ಮುಸಲ್ಮಾನರ ಈ ಗುಂಪುಗಳು ದೋಷಿಗಳಾಗಿವೆ. ಇವರುಗಳು ಕೇವಲ ಗುಂಪುಗಳಿಗೆ ಸೀಮಿತವಾಗಿದ್ದಾರೆ. ಮತ್ತೆ ಸರ್ಕಾರಗಳ ಕಡೆ ನೋಡುವುದಾದರೆ – ಅವು ಸಹ ಪಶ್ಚಿಮದತ್ತ, ದೊಡ್ಡ ಶಕ್ತಿಗಳತ್ತ ನೋಡುತ್ತಿವೆ. ಅಂತಹ ಬೃಹತ್ ಶಕ್ತಿಗಳೇ ಅದರ ದಾರವನ್ನು ಎಳೆಯುತ್ತಿವೆ. ಸೌದಿ ಅರೇಬಿಯಾದ ಅರಸರು ಇದೀಗ ತಮ್ಮ ಕಡೆಯಿಂದ ತುಂಬಾ ಶೌರ್ಯವನ್ನು ಪ್ರದರ್ಶಿಸಿದ್ದಾರೆ. ಅಲ್ಲಿ ಅಮೇರಿಕಾ ಸೇರಿದಂತೆ ಆರು–ಏಳು ಹೆಡ್ಸ್ ಆಫ್ ಸ್ಟೇಟ್‌ನವರು ಮೀಟಿಂಗ್ ಕಾಲ್ ಮಾಡಿದ್ದರು. ಅದಕ್ಕೆ ತಾನು ಹೋಗುವುದಿಲ್ಲ, ತನ್ನ ಪ್ರತಿನಿಧಿಯನ್ನು ಕಳುಹಿಸುವೆನು ಎಂದು ಸೌದಿ ಅರಸರು ಹೇಳಿದರು. ಜನರು ಇದನ್ನು ಕೇಳಿ ತುಂಬಾ ಆಶ್ಚರ್ಯಪಟ್ಟರು. ಆದರೆ ಸೌದಿ ರಾಜರು ಅಸ್ವಸ್ಥರಾಗಿದ್ದಾರೆ, ರೋಗಿಯಾಗಿದ್ದಾರೆ ಎಂದು ಜನರು ತಿಳಿದಿರಲಿಲ್ಲ. ಅಲ್ಲಿ ಏನಾಗುತ್ತಿದೆ ಎಂಬುದು ಜನರಿಗೆ ಅರಿವೇ ಆಗಿರಲಿಲ್ಲ.

ಹಾಗೆ ಪ್ರತಿನಿಧಿಯಾಗಿ ಕಳುಹಿಸಲ್ಪಟ್ಟವನು ತುಂಬಾ ಶಕ್ತಿಶಾಲಿಯಾಗಿದ್ದನು. ಅವನು ಅಮೇರಿಕಕ್ಕೆ ಹೋಗಿ ಧರ್ಮಬದ್ದವಾಗಿ ನಡೆದುಕೊಂಡಿದ್ದಾನೆಂದು ಜನರು ತಪ್ಪಾಗಿ ಕಲ್ಪಿಸಿಕೊಂಡರು. ಆದರೆ ಅಂತಹದ್ದು ಏನೂ ನಡೆದಿರಲಿಲ್ಲ. ಅಮೇರಿಕಾದ ಕುತಂತ್ರ ಅವರ ಮೇಲೆ ನಡೆಯುತ್ತಿದೆ. ಅವರದ್ದು ಅಮೇರಿಕಾದ ಮೇಲೆ! ಅವರೆಲ್ಲರ ಜುಟ್ಟು ಇಸ್ರೇಲ್‌ನ ಕೈಯಲ್ಲಿದೆ. ಈಗ ಇಸ್ರೇಲ್ ಸೌದಿ ಅರೇಬಿಯಾವನ್ನು ಹೊಗಳುತ್ತದೆ – ಭೇಷ್ ನೀವು ಇರಾನಿನ ಮೇಲೆ ಆಕ್ರಮಣ ಮಾಡಿದಿರಿ. ಶಿಯಾಗಳ ಹತ್ಯೆ ಮಾಡಿದಿರಿ ಎಂದು. ಹೀಗೆಲ್ಲ ದೌರ್ಜನ್ಯಗಳು ನಡೆಯುತ್ತಿವೆ.

ಸರ್ಕಾರಗಳು ಸಹ ಆ ಬೃಹತ್ ಶಕ್ತಿಗಳ ಕೈಯಲ್ಲಿವೆ. ಅದು ಯಾವ ದೇಶದ ಪ್ರಗತಿಯನ್ನೂ ಸಹಿಸುವುದಿಲ್ಲ. ನನಗೆ ಓರ್ವ ಮಿತ್ರರು ತಿಳಿಸಿದರು. ಖತರ್‌ನಲ್ಲಿ ತುಂಬಾ ಪ್ರಗತಿಯಾಗುತ್ತಿದೆ ಎಂದು. ನಾನು ಹೇಳಿದೆ – ಚಿಂತೆ ಮಾಡಬೇಡಿರಿ. ಬೇರುತ್ ಸಹ ಒಂದು ಕಾಲದಲ್ಲಿ ಪ್ಯಾರೀಸ್ ಆಗಿದ್ದಿತು. ಬಾಗ್ದಾದ್ ಸಹ ಒಂದು ಕಾಲದಲ್ಲಿ ಯೂರೋಪ್ ಎಂದು ಕರೆಯಲ್ಪಡುತ್ತಿತ್ತು. ಜನರು ಹೇಳುತ್ತಿದ್ದರು – ಮಹ್‌ವಾದ್ ಅವರನ್ನು ಯಾರೂ ಕೊನೆಗೊಳಿಸಲು

ಸಾಧ್ಯವಿಲ್ಲ. ಆದರೆ ಈಗ ನೋಡಿ – ಆ ಎರಡು ದೇಶಗಳ ಗತಿ ಏನಾಗಿದೆ? ನಾನು ಅವರಿಗೆ ಹೇಳಿದೆ: ಯಾವಾಗ ಖತರ್ ಸಹ ಲೆಬ್‌ನಾನ್ ಮತ್ತು ಮುಗ್‌ಬಾದ್ ರೀತಿಯಲ್ಲಿ ಪ್ರಗತಿ ಹೊಂದಿದೆ ಎಂದು ಜನರು ತಿಳಿಯವರೋ ಆಗ ಅದು ಯಾವ ರೀತಿ ನಿರ್ನಾಮವಾಗುವುದೆಂದರೆ ಅದರ ಸ್ಥಳ ಗುರುತೂ ಸಿಗಲಿಕ್ಕಿಲ್ಲ. ಹಾಗಾಗಿ ನೀವು ಯಾವುದೇ ರೀತಿಯ ಸಂತೋಷಪಡುವಂತಿಲ್ಲ.

**ಪತ್ರಕರ್ತರು ಪ್ರಶ್ನೆ ಮಾಡಿದರು: ಕೆಲ ಕಾಲದಿಂದ ಲೋಕವು ಬೋಕುಹರಾಮ್ ಮತ್ತು ISIS ನ ಕಿತಾಪತಿಯ ಬಗ್ಗೆ ಚರ್ಚಿಸುತ್ತಿದೆ ಆದರೆ ಅಹ್ಮದಿಯ ಖಿಲಾಫತ್ ಮತ್ತು ಜರ್ಮನರು ಕೇಳುವಂತಹ ಇತರ ಖಿಲಾಫತ್‌ಗಳಲ್ಲಿ ಏನು ವ್ಯತ್ಯಾಸವಿದೆ?**

ಹುಝೂರ್ ಹೇಳಿದರು. ಖಿಲಾಫತಿನ ವಿಷಯದಲ್ಲಿ ಹೇಳುವುದಾದರೆ ಇದೇನು ಹೊಸ ಖಿಲಾಫತ್ ಅಲ್ಲ. ಬೋಕುಹರಾಮನವರು ಹೇಳುತ್ತಾರೆ – ನಾವು ಖಲೀಫರಾಗಿದ್ದೇವೆ ಎಂದು. ISIS ನವರೂ ಅದನ್ನೇ ಹೇಳುತ್ತಾರೆ. ನಾವು ಮುಸ್ಲಿಮರ ಖಲೀಫರಾಗಿದ್ದೇವೆ ಎಂದು. ಸೌದಿ ಅರಸರು ಹೇಳಲಿ, ಬಿಡಲಿ ಅವರ ಮನಸ್ಸಿನಲ್ಲಿಯೂ ಇಂತಹದೇ ಅಭಿಪ್ರಾಯವಿದೆ. ತಾವೇ ಖಲೀಫರೆಂದು ಕರೆಯಲ್ಪಡಲಿ ಎಂದು. ಇದಕ್ಕಿಂತ ಮುಂಚೆ ಇಷ್ಟು ಇಸ್ಲಾಮಿನ ಅಧ:ಪತನ ಆಗಿರಲಿಲ್ಲ. ಆಗ ಉಸ್ಮಾನಿಯಾ ಆಡಳಿತದಲ್ಲಿ ಖಿಲಾಫತ್ ನಡೆಯುತ್ತಿತ್ತು. ಆಗ ಹ ಮಸೀಹ್ ಮೌದ್(ಅ) ಹೇಳಿದ್ದರು. ಈಗ ಯಾವ ಖಿಲಾಫತ್ ಕೂಡಾ ಇಲ್ಲ. ಇದೀಗ ನಾನು ಬಂದಿರುತ್ತೇನೆ. ಅವರು ಬಂದ ಕೆಲವು ವರ್ಷಗಳಲ್ಲಿಯೇ ಉಸ್ಮಾನಿಯ ಖಿಲಾಫತ್ ಕೊನೆಗೊಂಡಿತು.

ಹುಝೂರ್ ಹೇಳಿದರು: ಯಾವುದೇ ಕಾರ್ಯ ಮಾಡಬೇಕಾದರೆ ಅದಕ್ಕೆ ಕೆಲವು ತತ್ವಗಳು ಮತ್ತು ಪದ್ಧತಿಗಳು ಇರುತ್ತವೆ. ನಾವು ಹೇಳುವುದು ಇಸ್ಲಾಂ ಧರ್ಮವು ಅತೀ ಜಾಣ್ಮೆಯ ಶಿಕ್ಷಣ ನೀಡುವ ಧರ್ಮವಾಗಿದೆ. ಆದುದರಿಂದ ಅದರಲ್ಲಿ ಯಾವುದೇ ಅವಿವೇಕದ ಪದ್ಧತಿ ಇರಲು ಸಾಧ್ಯವಿಲ್ಲ. ಯಾರಾದರೂ ಸರ್ಕಾರ ರಚಿಸಬೇಕಾದರೆ ಅವನು ಏಕಾಏಕಿ ನಿಂತುಕೊಂಡು ನಾನು ನಿಮ್ಮ ನಾಯಕನಾಗಿದ್ದೇನೆ ಎಂದು ಘೋಷಣೆ ಮಾಡಿ ಎಲ್ಲಿರನ್ನೂ ತನ್ನ ಹಿಂದೆ ಬರಲು ಹೇಳಿದರೆ ಸಾಲದು. ಲೌಕಿಕ ಸರ್ಕಾರಗಳು ಬರುತ್ತವೆ, ಹೋಗುತ್ತವೆ. ರಾಜರು ಇತರ ದೇಶಗಳ ಮೇಲೆ ಆಕ್ರಮಣ ಮಾಡುತ್ತಾರೆ ಮತ್ತು ಅಲ್ಲಿಯ ಸರ್ಕಾರಗಳನ್ನು ತಮ್ಮ ವಶದಲ್ಲಿ ತೆಗೆದುಕೊಳ್ಳುತ್ತಾರೆ.

ಇಸ್ಲಾಂ ಧರ್ಮವು ಜಾಣ್ಮೆಯುಕ್ತ ಧರ್ಮವಾಗಿದೆ. ಅದು ಪ್ರತಿಯೊಂದು ವಿಷಯವನ್ನು ಪುರಾವೆ ಸಹಿತ ಹೇಳುತ್ತದೆ. ಇಸ್ಲಾಂ ಧರ್ಮವು ಖಿಲಾಫತ್ತಿನ ಕುರಿತು ಹೇಳುವುದೇನೆಂದರೆ ಖಿಲಾಫತ್ತಿನ ಮೊದಲು ನುಬುವತ್ತ್ ಬರಬೇಕಾಗಿದೆ. ಮತ್ತೆ ಖಿಲಾಫತ್ ಅಲಾ ಹಾಜಿಹಿನ್ನುಬುವತ್ತ್ (ಅಂದರೆ ಮೊದಲು ಪ್ರವಾದಿತ್ವ ಅನಂತರ ಪ್ರವಾದಿತ್ವ ಆಧಾರಿತಾ ಖಿಲಾಫತ್) ಈ ತತ್ವದ ಮೇಲೆ ನಡೆಯುವ ಖಿಲಾಫತ್ ನುಬುವತ್ತಿನ ತತ್ವಗಳ ಮೇಲೆ ನಡೆಯುತ್ತದೆ ನುಬುವತ್ತಿನ ತತ್ವಗಳೇನು? ನುಬುವತ್ ನ್ಯಾಯವನ್ನು ಒದಗಿಸಬೇಕು. ಸಮಾನತೆಯನ್ನು ಕಲಿಸಬೇಕು. ಅಲ್ಲಾಹನೆಡೆಗೆ ಕರೆಯಬೇಕು. ಕರುಣೆ ತೋರಬೇಕು. ಹಿಂಸೆಗೆ ಒತ್ತು ನೀಡಿರುತ್ತಿದ್ದರೆ ಅಲ್ಲಾಹನು ತನ್ನನ್ನು ರಹ್ಮಾನ್ ಮತ್ತು ರಹೀಮ್ ಎಂದು ಹೇಳಿಕೊಳ್ಳುತ್ತಿರಲಿಲ್ಲ. ಹಿಂಸೆಯನ್ನು ವೈಭವೀಕರಿಸಿದ್ದರೆ ಅಲ್ಲಾಹನು ರಸೂಲುಲ್ಲಾಹ್(ಸ) ರನ್ನು ರಹ್ಮತುನ್ ಲಿಲ್ಲಾಲಮೀನ್ ಎಂದು ಕರೆಯುತ್ತಿರಲಿಲ್ಲ. ಇಸ್ಲಾಂ ಧರ್ಮದಲ್ಲಿ ಯುದ್ಧಗಳು ನಡೆದರೂ ಪವಿತ್ರ ಖುರ್‌ಆನ್ ಅಂತಹ ಯುದ್ಧಗಳ ಅವಶ್ಯಕತೆಯ ಬಗ್ಗೆ ಪುರಾವೆಗಳನ್ನು ಒದಗಿಸಿವೆ. ವಿನಾಕಾರಣ ಯಾವ ಯುದ್ಧವೂ ಆಗಲಿಲ್ಲ. ಪವಿತ್ರ ಖುರ್‌ಆನ್ ಹೇಳಿದ್ದು ಕಾರಣವಿಲ್ಲದೆ ಆಕ್ರಮಣ ಮಾಡಬಾರದು. ಮತ್ತು ಖಡ್ಗಗಳನ್ನು ಎತ್ತಬಾರದು. ಯಾವುದಕ್ಕೂ ಮೊದಲು ತಮ್ಮ ಪ್ರತಿಸ್ಪರ್ಧಿಯನ್ನು ಕೇಳಬೇಕಾಗುತ್ತದೆ. ನೀವು ಏನು ಬಯಸುತ್ತೀರಿ? ಯುದ್ಧ ಬಯಸುವಿರೋ ಅಥವಾ ಮೈತ್ರಿಯನ್ನೋ ಎಂದು. ಶತ್ರುಗಳ ಮೇಲೆ ಯಾವ ಯುದ್ಧವನ್ನೂ ಹೇರಲಾಗುವುದಿಲ್ಲ.

ಅವರು ಮುಂದುವರಿಯುತ್ತಾ ಹೇಳಿದರು. ಪವಿತ್ರ ಖುರ್‌ಆನ್‌ನ ಶಿಕ್ಷಣವಿದು: ನಿಮಗೆ ಯಾರಾದರೂ ಸಲಾಮ್ ಹೇಳಿದರೆ ಅವರೊಡನೆ ನೀವು ಮುಸ್ಲಿಮರಲ್ಲ ಎಂದು ಹೇಳಬಾರದು. ಅಂತೂ ಖಿಲಾಫತ್ ದೊರೆತ ಮೇಲೆಯೂ ಕೆಲವು ತತ್ವಗಳಿರುತ್ತವೆ. ಆ ತತ್ವಗಳ ಅನುಸಾರವೇ ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು. ಮೊದಲು ನುಬುವತ್ತ್ ಮತ್ತೆ ಖಿಲಾಫತ್ ಅಲಾ ಹಾಜಿ ನ್ನುಬುವತ್ತ್. ಅನಂತರ ಇದರ ಹೊರತಾಗಿ ಇಸ್ಲಾಮಿಕ ಆಡಳಿತವಿದ್ದರೂ ಅದರ ರಾಜನು ತನ್ನನ್ನು ಖಲೀಫ ಅಂದುಕೊಳ್ಳಬಹುದು. ಆದರೆ ಅದು ಅರಸುತನ ಆಗಿರುವುದು. ಮತ್ತೆ ಅದರ ಮುಂದೆ ದೌರ್ಜನ್ಯಭರಿತ ಅರಸುತನವಿರುವುದು, ಉಗ್ರವಾದದ ಅರಸುತನವಿರುವುದು. ಮತ್ತೆ ಒಂದು ಕಾಲ ಬರುವುದು, ಆಗ ಹಝ್ರತ್ ಮಸೀಹ್ ಮೌವೂದ್(ಅ) ಬರುವರು. ಅವರ ನಂತರ ಖಿಲಾಫತ್ ಸ್ಥಾಪನೆಯಾಗುವುದು. ಅದು ಇಸ್ಲಾಮಿ ಶರೀಯತ್ತನ್ನು ಜಾರಿಗೆ ತರುವುದು.

ಖಡ್ಗದ ಮೂಲಕ ಇಸ್ಲಾಮ್ ಧರ್ಮವನ್ನು ಪ್ರಚಾರಪಡಿಸುವುದೆಂದರೆ ಅದನ್ನು ಒಪ್ಪದವರನ್ನು ಹತ್ಯೆ ಮಾಡುವುದಾಗಿದೆ. ಕ್ರೈಸ್ತರನ್ನು ಹತ್ಯೆ ಮಾಡುವುದಾಗಿದೆ. ಒಬ್ಬ ರಕ್ತ ಪಿಪಾಸಿ ಮಹದಿ ಬಂದು ಖಡ್ಗ ಹಿಡಿಯುವರು. ಹಂದಿಗಳನ್ನು ಕೊಲ್ಲುವರು. ಹೀಗೆ ಇಡೀ ಲೋಕವನ್ನು ಸರ್ವನಾಶ ಮಾಡಿದರೆ ಹಿಂದೆ ಉಳಿಯುವವರು ಯಾರು? ಇದರ ಬಗ್ಗೆ ದೀರ್ಘವಾದ ಹದೀಸಿದೆ. ಅದನ್ನು ಸಂಕ್ಷಿಪ್ತವಾಗಿ ನಾನು ಹೇಳುತ್ತೇನೆ.

ಹಝ್ರತ್ ರಸೂಲುಲ್ಲಾಹ್(ಸ) ಪ್ರಸ್ತಾಪಿಸಿದ ತತ್ವಗಳು ನಿಜವಾದ ತತ್ವಗಳಾಗಿವೆ. ಅವರು ಹೇಳಿದರು: ನಿಜವಾದ ಖಿಲಾಫತ್ ಮಹದಿಯ ಇಮಾಮರು ಬಂದ ನಂತರವೇ ಸ್ಥಾಪನೆಯಾಗುವುದು. ಆದುದರಿಂದ ಹಝ್ರತ್ ಮಸೀಹ್ ಮೌವೂದ್(ಅ) ತನ್ನನ್ನು ಖಾತಮುನ್ ಖಲೀಫ ಎಂದು ಹೇಳಿದರು. ಆದ ಕಾರಣ ನುಬುವತ್ತ್ ಇಲ್ಲದೆ ಖಿಲಾಫತ್ ಬರಲು ಸಾಧ್ಯವಿಲ್ಲ. ಖುಲ್‌ಫಾಯೆ ರಾಶಿದೀನ್ ನಾಲ್ವರಾಗಿದ್ದರು. ಇದೀಗ ಈ ಬಗ್‌ದಾದಿ ಸಾಹೇಬರು 5ನೇಯವರೇ? ಹಿಂದಿನ 14 ನೂರು ವರ್ಷಗಳಲ್ಲಿ ಯಾವ ಖಲೀಫರೂ ಇರಲಿಲ್ಲವಲ್ಲ!.

ಹುಝೂರ್ ಹೇಳಿದರು: ರಸೂಲುಲ್ಲಾಹ್(ಸ) ಹೇಳಿದ ತತ್ವವೇ ನಮಗೆ ಮಾರ್ಗದರ್ಶನವಾಗಿದೆ. ದೌರ್ಜನ್ಯಯುಕ್ತ ಆಡಳಿತದ ನಂತರ ಮಸೀಹ್ ಮೌವೂದ್(ಸ) ಬರಲಿಕ್ಕಿತ್ತು. ಮತ್ತೆ ಅವರ ಮೂಲಕ ಮುಂದೆ ಖಿಲಾಫತ್ ಸ್ಥಾಪನೆಯಾಗಬೇಕಿತ್ತು. ಅದು ನುಬುವತ್ತಿನ ಆಧಾರದ ಮೇಲೆ ಖುಲಫಾಯೇ ರಾಶಿದಾಗಳ ತತ್ವಗಳಂತೆ ನಡೆಯಲಿಕ್ಕಿತ್ತು. ನಾವಂತೂ ಇಸ್ಲಾಮಿನ ಶಿಕ್ಷಣದಂತೆ ನಡೆದುಕೊಳ್ಳುತ್ತೇವೆ. ಅಹ್ಮದಿಯಾ ಜಮಾಅತ್‌ನಲ್ಲಿ ತತ್ವ ಆಧಾರಿತ ಖಿಲಾಫತ್ ಇದೆ. ತಾನಾಗಿ ನಿಂತು ನಾನು ಖಲೀಫ ಎಂದು ಹೇಳಿಕೊಳ್ಳುವ ಜಾಯಮಾನ ನಮ್ಮದಲ್ಲ. ನಾನಂತೂ ಖಿಲಾಫತ್ ಸಿಗದೇಯಿದ್ದರೆ ಒಳ್ಳೆಯದೆಂದು ಭಾವಿಸಿದ್ದೆ. ಆದರೆ ನನ್ನನ್ನು ಒತ್ತಾಯಪೂರ್ವಕವಾಗಿ ಎಳೆದು ತಂದರು. ಲೌಕಿಕ ಖಿಲಾಫತ್‌ಗಳನ್ನು ಬಲಾತ್ಕಾರಪೂರ್ವಕವಾಗಿ ಸ್ಥಾಪಿಸಲಾಗುತ್ತದೆ. ಆದರೆ ನಿಜವಾದ ಖಿಲಾಫತನ್ನು ಒತ್ತಾಯದಿಂದ ಕೊಡಲಾಗುತ್ತದೆ. ಅಲ್ಲಾಹನಿಂದ ನೀಡಲಾಗುವ ಖಿಲಾಫತ್ ಜನರ ಹೃದಯಗಳಲ್ಲಿ ನೆಲೆನಿಲ್ಲುತ್ತದೆ.

**(ಮುಂದುವರಿಯುವುದು)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ನ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರುತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅ)ರವರ ಹೊಸ ಖುತ್‌ಬ ಜುಮುಆ ಮತ್ತು ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರರ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕ)**

## ಸೂಚನೆ

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.

**email: www.kannadabadar@gmail.com**
**Mob or whatsapp: 8050330779**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 30 July 2020 Issue No. 29

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 28ರ ವರದಿಯ ಉಳಿದ ಭಾಗ)**

**24 ಮೇ ಭಾನುವಾರ 2015**

ಹುಝೂರ್(ಅಬಿಅ) ಮುಂಜಾನೆ ನಾಲ್ಕುವರೆ ಗಂಟೆಗೆ ಆಗಮಿಸಿ ವರದಿಗಳನ್ನು ಪರಿಶೀಲಿಸಿ ಕೆಲವು ನಿರ್ದೇಶನಗಳನ್ನು ನೀಡಿದರು.

ಕಾರ್ಯಕ್ರಮದನ್ವಯ ಹನ್ನೊಂದೂವರೆ ಗಂಟೆಗೆ ಹುಝೂರ್(ಅಬಿಅ) ತಮ್ಮ ಕಚೇರಿಗೆ ಆಗಮಿಸಿದರು. ಮುಕರ್ರಮ್ ಮುಬಾರಕ್ ಅಹ್ಮದ್ ಝುಫರ್ ಸಾಹಿಬ್ Addl ವಕೀಲುಲ್ ಮಾಲ್ ಲಂಡನ್ ಅವರನ್ನು ಕರೆಯಿಸಿಕೊಂಡರು ಮತ್ತು ಕೆಲವು ಕಚೇರಿ ಕೆಲಸದ ಕುರಿತು ಸಲಹೆಗಳನ್ನು ನೀಡಿದರು.

ಅನಂತರ ಕುಟುಂಬಗಳ ಹಾಗೂ ವೈಯಕ್ತಿಕ ಭೇಟಿಯ ಕಾರ್ಯಕ್ರಯ ಪ್ರಾರಂಭವಾಯಿತು.

### ಕುಟುಂಬಗಳ ಹಾಗೂ ವೈಯಕ್ತಿಕ ಭೇಟಿಗಳು

ಇಂದು ಮುಂಜಾನೆ ನಡೆದ ಈ ಅಧಿವೇಶನದಲ್ಲಿ 35 ಕುಟುಂಬಗಳ 137 ಜನರು ಹಾಗೂ ವೈಯಕ್ತಿಕವಾಗಿ 48 ಜನರು ತಮ್ಮ ಪ್ರಿಯ ನೇತಾರರೊಡನೆ ಭೇಟಿ ಮಾಡುವ ಭಾಗ್ಯ ಪಡೆದರು. ಇವೆಲ್ಲಾ ಕುಟುಂಬಗಳು ಮತ್ತು ಇತರರು ತಮ್ಮ ಪ್ರಿಯ ನೇತಾರರೊಡನೆ ಬಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಭೇಟಿ ಮಾಡಲು ಬಂದ ಈ ಕುಟುಂಬಗಳು ಜರ್ಮನಿಯ ಜಮಾಅತುಗಳಾದ HOFHEIN, EPPEHEIM, REUTLINGEN, TRIER, ಮನ್‌ಹಾಯಮ್, ಬುರಬಸಾಲ್ HEUSENSTAMM, LANGEN, STUTTGART, NIDDA, AALEN, DRESDEN, WALLDORE, ಪುಲ್ಡಾ, ಹಾಯ್ಡೆಲ್ ಬರ್ಗ್, WALLDORE, USINGEN, KARLSRUHE, GELNHAUSEN, FRIEDBERG, NEUHOF, MAINZ,GINSHEIN, HAMBURG ನಿಂದ ಬಂದಿದ್ದರು.

ಕೆಲವು ಜಮಾಅತುಗಳಿಂದ ಈ ಕುಟುಂಬಗಳು ಬಹು ದೂರದ ಪ್ರಯಾಣ ಬೆಳೆಸಿ ತಮ್ಮ ಪ್ರೀತಿಯ ಇಮಾಮರನ್ನು ಭೇಟಿ ಮಾಡಲು ಬಂದು ತಲುಪಿದ್ದರು.

ಜರ್ಮನಿಯ ಜಮಾಅತುಗಳಲ್ಲದೇ LITHUANIA ದೇಶದಿಂದ ಬಂದ ಜಮಾಅತ್ ಬಾಂಧವರು ಕೂಡಾ ಭೇಟಿಯ ಭಾಗ್ಯ ಪಡೆದರು.

ಹುಝೂರ್(ಅಬಿಅ) ಪ್ರೀತಿಪೂರ್ವಕವಾಗಿ ವಿಧ್ಯಾರ್ಥಿ ಬಾಲಕ, ಬಾಲಕಿಯರಿಗೆ ಲೇಖನಿ (Pen ) ನೀಡಿದರು ಮತ್ತು ಸಣ್ಣ ವಯಸ್ಸಿನ ಮಕ್ಕಳಿಗೆ ಚಾಕ್ಲೇಟ್ ನೀಡಿದರು.

ಇಂದು ಭೇಟಿ ಮಾಡಲು ಬಂದ ಕುಟುಂಬಗಳಲ್ಲಿ ಒಂದು ದೊಡ್ಡ ಸಂಖ್ಯೆ ಪಾಕಿಸ್ತಾನದಿಂದ ಬಂದವರದ್ದಾಗಿತ್ತು. ಅವರು ತಮ್ಮ ಜೀವನದಲ್ಲಿ ಮೊದಲ ಬಾರಿಗೆ ಖಲೀಫತುಲ್ ಮಸೀಹರೊಂದಿಗೆ ಭೇಟಿ ಮಾಡುವ ಭಾಗ್ಯ ಪಡೆದರು. ತಮ್ಮದೇ ದೇಶದಲ್ಲಿ ತಮ್ಮ ದೇಶವಾಸಿಗಳಿಂದಲೇ ಹಿಂಸಿಸಲ್ಪಡುತ್ತಿರುವ ಈ ಜನರು ಮತ್ತು ಅವರ ಮಕ್ಕಳು ಎಷ್ಟು ಧನ್ಯರು! ಅವರು ಇಂದು ಕೆಲವು ಕ್ಷಣಗಳನ್ನಾದರೂ ತಮ್ಮ ಪ್ರೀತಿಯ ಇಮಾಮರೊಂದಿಗೆ ಕಳೆಯುವ ಭಾಗ್ಯ ಪಡೆದರು. ಅವರ ದುಃಖ ದುಮ್ಮಾನಗಳು ಮಾಯವಾದವು ಮತ್ತು ಹೃದಯಗಳು ಶಾಂತವಾದವು. ಅವರು ಕೊನೆಗೊಳ್ಳದ ಪ್ರಾರ್ಥನೆಗಳ ನಿಧಿಯನ್ನು ತೆಗೆದುಕೊಂಡು ಇಲ್ಲಿಂದ ನಿರ್ಗಮಿಸಿದರು. ಭೇಟಿಗಳ ಈ ಕಾರ್ಯಕ್ರಮ 2 ಗಂಟೆ 15 ನಿಮಿಷಕ್ಕೆ ಕೊನೆಗೊಂಡಿತು.

### ಆಮೀನ್ ಸಮಾರಂಭ

ಹುಝೂರ್(ಅಬಿಅ) ಇಂದು ಈ ಕೆಳಗೆ ನಮೂದಿತ ಬಾಲಕ ಬಾಲಕಿಯರಿಂದ ಪವಿತ್ರ ಖುರ್‌ಆನಿನ ಒಂದೊಂದು ವಚನವನ್ನು ಆಲಿಸಿದರು ಮತ್ತು ಕೊನೆಯಲ್ಲಿ ದುಆ ಮಾಡಿಸಿದರು. ಕೆಳಗೆ ನಮೂದಿತ ಅದೃಷ್ಟಶಾಲಿ ಬಾಲಕ ಬಾಲಕಿಯರು ಈ ಆಮೀನ್ ಸಮಾರಂಭದಲ್ಲಿ ಭಾಗವಹಿಸುವ ಭಾಗ್ಯ ಪಡೆದರು.

ಅಝೀಝುಮ್ ಅಹ್ಮದ್ ಫೌಝಾನ್ ರಝಾ, ಅಝೀಝುಮ್ ಅದನಾನ್ ಮಹ್ಮೂದ್, ಅಝೀಝುಮ್ ಉಮಂಗ್ ಮಹ್ಮೂದ್, ಸಬಾಹತ್ ಅಹ್ಮದ್ ಶಕೀಲ್, ಬಿಲಾಲ್ ಅಹ್ಮದ್, ತಹ್ಸೀನ್ ರಝಾ ಅಹ್ಮದ್, ಬಾಸಿಲ್ ಅಹ್ಮದ್ ಭಟ್, ಮಲಕ್ ಫಾರಾನ್ ಅಹ್ಮದ್, ಇಹ್ತಿಶಾಮ್ ಅಹ್ಮದ್, ಮಗ್ಫಾರ್ ಅಹ್ಮದ್, ಬಾಸಿಲ್ ಅಹ್ಮದ್ ಬಾಜ್ವಾಹ್, ಜಹಾನ್ ಝೇಬ್ ತನ್ವೀರ್, ಸುಹೈಬ್ ಕಾಮ್ರಾನ್ ಅಹ್ಮದ್ ಜಾವೇದ್, ಝೀಶಾನ್ ಮಹ್ಮೂದ್ ಮಲಕ್, ಫಾರಾನ್ ಮಹ್ಮೂದ್ ಮಲಕ್, ಝುಕೀ ಅಹ್ಮದ್, ಜಾಝಿಬ್ ಅಹ್ಮದ್, ಶಾಝಿಲ್ ನಾಸಿರ್.

ಅಝೀಝು ತಹ್ಮೀನ ಅಹ್ಮದ್, ಕಾಇನಾತ್ ನಫೀಸ್, ಸಾಎರಹ್ ಇಫ್ಫತ್, ಗಝಾಲ ತಹ್ರೀಮ್, ಮರಿಯಮ್ ಗುಲಗ, ಹಾಲ ಖಮರ್ ಮುಝಫರ್, ಖುರ್ರತುಲ್ ಐನ್.

ಆಮೀನ್ ಸಮಾರಂಭದಲ್ಲಿ ಭಾಗವಹಿಸಿದ ಈ ಬಾಲಕ ಬಾಲಕಿಯರು ಕೆಳಗೆ ನಮೂದಿತ ಜಮಾಅತುಗಳಿಂದ ಬಂದಿದ್ದರು.

ಲಿಯುಬಕ್, ಪುರ್‌ಖಸಾಲ್, Heilbronn, Eppelheim, Nurberg, Pforxheim, Bremen, Karlsruhe, Hiedel berg, Hannover, Butehude, soest, Ratingen, Calw, Dortmund, Renningen, Waiblingen, Esslingen.

ಈ ಸಮಾರಂಭದಲ್ಲಿ ಭಾಗವಹಿಸಲು Hannover Bremen ಬಂದ ಬಾಲಕ ಬಾಲಕಿಯರು 350 ಕಿ.ಮೀ ಮತ್ತು Bremen ನಿಂದ ಬಂದ ಮಕ್ಕಳು 430 ಕಿ.ಮೀ ಗಳ ಪ್ರಯಾಣ ಬೆಳೆಸಿ ಭಾಗವಹಿಸುವ ಭಾಗ್ಯ ಪಡೆದರು.

ಈ ಆಮೀನ್ ಸಮಾರಂಭದ ನಂತರ ಹುಝೂರ್(ಅಬಿಅ) ಝುಹರ್ ಮತ್ತು ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ತಮ್ಮ ವಸತಿನಿಲಯಕ್ಕೆ ತೆರಳಿದರು.

ಈ ಹಿಂದೆಯೇ ಹುಝೂರ್(ಅಬಿಅ) ಕೆಲವು ಕಛೇರಿಯ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ನಂತರ ತಮ್ಮ ಕಛೇರಿಗೆ ಆಗಮಿಸಿ ಕುಟುಂಬಗಳ ಭೇಟಿಯನ್ನು ಪ್ರಾರಂಭಿಸಿದರು.

### ಕುಟುಂಬಗಳ ಭೇಟಿ

ಇಂದು ಸಂಜೆಯ ಈ ಕಾರ್ಯಕ್ರಮದಲ್ಲಿ ಜರ್ಮನಿಯ 43 ಜಮಾಅತ್‌ಗಳಿಂದ ಬಂದ 56 ಕುಟುಂಬಗಳ 204 ಜನರು ಹಾಗೂ 48 ಜನರು ವೈಯಕ್ತಿಕವಾಗಿ ತಮ್ಮ ಪ್ರೀತಿಯ ಇಮಾಮರೊಡನೆ ಭೇಟಿಯಾಗುವ ಭಾಗ್ಯ ಪಡೆದರು.

Kassel ನಿಂದ ಬಂದ ಕುಟುಂಬಗಳು 180 ಕಿ.ಮೀ, Honnover ನಿಂದ ಬಂದ ಕುಟುಂಬಗಳು 350 ಕಿ.ಮೀಗಳ ದೀರ್ಘವಾದ ಪ್ರಯಾಣ ಬೆಳೆಸಿ ತಮ್ಮ ನೇತಾರರ ದರ್ಶನಕ್ಕಾಗಿ ಬಂದು ತಲುಪಿದ್ದರು. ಇವೆಲ್ಲಾ ಕುಟುಂಬಗಳು ಮತ್ತು ಇತರ ಸದಸ್ಯರು ತಮ್ಮ ಪ್ರೀತಿಯ ಇಮಾಮರೊಡನೆ ಬಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್(ಅಬಿಅ) ಪ್ರೀತಿಪೂರ್ವಕವಾಗಿ ವಿದ್ಯೆ ಪಡೆಯುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಲೇಖನಿ (Pen ) ನೀಡಿದರು ಮತ್ತು ಸಣ್ಣ ವಯಸ್ಸಿನ ಬಾಲಕ ಬಾಲಕಿಯರಿಗೆ ಚಾಕ್‌ಲೇಟ್ ನೀಡಿದರು. ಭೇಟಿಗಳ ಈ ಕಾರ್ಯಕ್ರಮವು 9:00 ಘಂಟೆಯವರೆಗೆ ನಡೆಯಿತು.

ಅನಂತರ ಹುಝೂರ್(ಅಬಿಅ) ಮುಕರ್ರಮ್ ಸಯ್ಯದ್ ರಫೀಕ್ ಸಾಹೇಬ್ ಅವರ **ವಲಿಮ** (*** ) **ದಾವತ್‌ನಲ್ಲಿ** ಭಾಗವಹಿಸಿದರು. ಇದರ ವ್ಯವಸ್ಥೆಯು ಬೈತುಲ್ ಸುಭಾಹುವಿನ ಒಂದು ಸಭಾಂಗಣದಲ್ಲಿ ಮಾಡಲಾಗಿತ್ತು. (ಸಯ್ಯದ್ ರಫೀಕ್ ಸಾಹೇಬ್ MTA International ಗ್ರಂಥಾಲಯ ವಿಭಾಗದಲ್ಲಿ ಸೇವೆ ಮಾಡುವ ಭಾಗ್ಯ ಪಡೆದಿದ್ದಾರೆ. ಅವರ ವಿವಾಹವು ಜರ್ಮನಿಯಲ್ಲಿ ಆಗಿರುತ್ತದೆ)

*(ಉಳಿದ ವರದಿ ಪುಟ ಸಂಖೆ 08 ರಲ್ಲಿ ಓದಿರಿ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.